# ಮೂರು ಲೋಕ

ಈ ಹೊತ್ತು ಲೋಕದಲ್ಲಿ BBC WORLD ಎಂದು ಕೇಳಿದ್ದೀರಿ ಅಂದರೇನು? ನ್ಯೂಸಿನ ಲೋಕ ಎಂದರ್ಥ !

ಅದೇತರಹ STAR WORLD ಎಂದು ಕರೆಯುತ್ತಾರೆ ಅಂದರೇನು?
ಚಿತ್ರ ನಟ, ನಟಿಯರುಗಳ ಬಗ್ಗೆ ಇರುವ ವಿಷಯಗಳು ಈ STAR WORLD ನಲ್ಲಿ ಸಿಕ್ಕುತ್ತದೆ.

ಅದೇ ರೀತಿ FUN WORLD ಅಂದರೇನು? ಇಲ್ಲಿ ಆಟ ಆಡುವುದರ ಬಗ್ಗೆ ಮಾಹಿತಿಯನ್ನು ನೋಡಬಹುದು.

ಮಾತ್ರವಲ್ಲದೆ FOOD WORLD, MUSIC WORLD ಗಳ ಬಗ್ಗೆ ಸಹ ಕೇಳಿದ್ದೀರಿ, ಹೀಗೆ ವಿವಿಧ ರೀತಿಯ ಲೋಕಗಳ ಬಗ್ಗೆ ಇದೆ. ಇದೇ ರೀತಿ ಬೇರೆ ಬೇರೆ ಲೋಕಗಳು ಇವೆ. ಮಾತ್ರವಲ್ಲದೆ ನಮ್ಮ ಸತ್ಯವೇದದಲ್ಲಿ ಯುಗಗಳು, ಪ್ರಪಂಚಗಳು ಎಂದು ಕರೆಯುತ್ತಾರೆ. ಹಾಗೆಯೇ ಸತ್ಯವೇದದಲ್ಲಿಯೂ ಯುಗಗಳು (ಪ್ರಪಂಚ)ಗಳು ಎಂದು ಕರೆಯುತ್ತಾರೆ. ಹಾಗೆಯೇ ನಾವು ಹಿಂದೂಧರ್ಮದಲ್ಲಿ ನೋಡುವಾಗ 3 ಯುಗವೆಂದು ಕರೆಯುತ್ತಾರೆ.
1)ತ್ರೈತಾಯುಗ 2)ದ್ವಾಪರಯುಗ 3)ಕಲಿಯುಗ ಹೀಗೆ 3 ಯುಗಗಳ ಬಗ್ಗೆ ನೋಡಬಹುದು.

ನಮ್ಮ ಕ್ರೈಸ್ತರು ಮೂರು ಲೋಕಗಳ ಬಗ್ಗೆ ತಿಳಿಸುವುದೇನೆಂದರೆ 1)ಪರಲೋಕ 2)ಭೂಲೋಕ 3)ಪಾತಾಳವೆಂದು, ಆದರೆ ಸತ್ಯವೇದದಲ್ಲಿ ಇವುಗಳಿಗೆ ಏನೆಂದು ಕರೆಯುತ್ತಾರೆ? ಮತ್ತು ಅವು ಯಾವುವು?
1) ಮೊದಲನೆ ಲೋಕ, 2) ಎರಡನೆ ಲೋಕ, 3) ಮೂರನೆ ಲೋಕ ಎಂದು ಹೇಳುತ್ತಾರೆ.

ಈ ಮೊದಲನೆ ಲೋಕದ ಬಗ್ಗೆ ಸತ್ಯವೇದದಲ್ಲಿ, ಪೂರ್ವದಲ್ಲಿದ್ದಂತ ಅಥವಾ ಆಕಾಲದಲ್ಲಿದ್ದಂತ ಭೂಮಿ, ಆಕಾಶವೆಂದು ಕರೆಯುತ್ತಾರೆ, ಇದರ ಬಗ್ಗೆ ನಾವು ಸತ್ಯವೇದದಲ್ಲಿ ಎಲ್ಲಿ ಓದುತ್ತೇವೆ ಎಂದರೆ **2ಪೇತ್ರ 3:6.**

ಎರಡನೆ ಲೋಕದ ಬಗ್ಗೆ ಸತ್ಯವೇದದಲ್ಲಿ ಈಗಿರುವ ಭೂಮಿ, ಆಕಾಶಗಳು ಎಂದು ಅದೇ ವಾಕ್ಯದಲ್ಲಿ ಮತ್ತು ಆತನು ಈಗಿನ ದುಷ್ಟಯುಗವೆಂದು, **ಗಲಾತ್ಯ 1:4** ರಲ್ಲಿ ತಿಳಿಸುತ್ತಾರೆ.

ಮೂರನೆ ಲೋಕದ ಬಗ್ಗೆ "ನಾವು ಪ್ರಸ್ತಾಪಿಸುವ ಮುಂದಣ ಸಾಮ್ರಾಜ್ಯವನ್ನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ" **ಇಬ್ರಿಯರಿಗೆ 2:**5. ಅಂದರೆ ಮುಂದೆ ಬರುವ ಲೋಕ. ಮೊದಲನೇ ಲೋಕಕ್ಕೆ ಒಂದು ಆದಿ, ಅಂತ್ಯ ಇತ್ತು, 2ನೇ ಲೋಕಕ್ಕೆ ಆದಿ, ಅಂತ್ಯ ಇದೆ, ಮತ್ತು 3ನೇ ಲೋಕಕ್ಕೆ ಆದಿ, ಅಂತ್ಯ ಇದೆ, ಈ ಮೂರು ಲೋಕಗಳ ಬಗ್ಗೆ ಸತ್ಯವೇದದಲ್ಲಿ ಒಂದೇ ಕಡೆ ಮಾತಾಡಿದ್ದಾರೆ ಅದು **2ಪೇತ್ರ 3:5–13** ರಲ್ಲಿ. 5ನೇ ವಾಕ್ಯದಲ್ಲಿ "ಪೂರ್ವಕಾಲದಲ್ಲಿದ್ದ ಭೂಮಿ ಆಕಾಶಗಳು ದೇವರ ವಾಕ್ಯದ ಮುಖಾಂತರ ನೀರಿನಿಂದಲೇ ಉಂಟಾಗಿ ನೀರಿನಿಂದಲೇ ಆದಾರಗೊಂಡಿರುವಲ್ಲಿ ಆ ನೀರುಗಳಿಂದಲೇ ಆ ಕಾಲದಲ್ಲಿದ್ದ ಲೋಕವು ಜಲ ಪ್ರಳಯದಲ್ಲಿ ನಾಶವಾಯಿತು" ಅಂದರೆ ಭೂಮಿ ಆಕಾಶವನ್ನು ನೀರಿನಿಂದ ನಾಶಮಾಡಿದರು ಇದು ಪೂರ್ವ ಕಾಲದಲ್ಲಿದ್ದ ಲೋಕ ( **1ನೇ ಲೋಕ** ) ಎಂದು ಹೇಳುವುದು. ಇದನ್ನು ಇಂಗ್ಲೀಷ್ KJV BIBLE ನಲ್ಲಿ HEVEN AND EARTH ಎಂದು ಬರೆಯಲ್ಪಟ್ಟಿದೆ, ಭೂಮಿ ಆಕಾಶ ಎರಡು ಸೇರಿದರೆ ಮಾತ್ರ ಒಂದು ಲೋಕ ಅಂತ ಹೇಳುತ್ತಾರೆ. ಇದನ್ನು ದೇವರು ಜಲಪ್ರಳಯದಲ್ಲಿ ನಾಶ ಮಾಡಿದರು.

**ಉದಾ :** ಭೂಮಿ ಎಂದರೆ, ಪಾಕಿಸ್ತಾನದ ವಿಮಾನ ನಮ್ಮ ದೇಶದ ಮೂಲಕ ಹಾದು ಹೋಗಲು ಸಾಧ್ಯವಿಲ್ಲ ಕಾರಣ ನಮ್ಮ ದೇಶಕ್ಕೂ ಒಂದು ಆಕಾಶ ಇದೆ, ಅದರ ಮೂಲಕ ಹಾದು ಹೋದರೆ ಭಾರತದ ಮೇಲೆ ಹಾದು ಹೋದ ಹಾಗೆ, ಅದೇ ರೀತಿ ಲೋಕ ಅಂದರೆ ಭೂಮಿ ಆಕಾಶ ಎರಡು ಸೇರಿದೆ ಎಂದು ತಿಳಿಯಬೇಕು.

**2ಪೇತ್ರ 3:7** ಈ ವಾಕ್ಯದಲ್ಲಿ ಎರಡನೇ ಲೋಕದ ಬಗ್ಗೆ "ಈಗಿರುವ ಭೂಮಿ ಆಕಾಶಗಳು ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವುದಕ್ಕೆ ಇಡಲ್ಪಟ್ಟಿದೆ" ಇಲ್ಲಿ ಎರಡನೇ ಲೋಕ ಎಂದು ಹೇಲಿಲ್ಲ ಬದಲಾಗಿ ಈಗಿರುವ ಭೂಮಿ ಆಕಾಶವೆಂದು ಹೇಳುತ್ತಾರೆ. ಇದೇ ಎರಡನೇ ಲೋಕ.

**2ಪೇತ್ರ 3:13** ಮೂರನೇ ಲೋಕದ ಬಗ್ಗೆ "ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನ ಆಕಾಶಮಂಡಲವನ್ನು ನೂತನ ಭೂಮಂಡಲವನ್ನು ಎದುರು ನೋಡುತ್ತಾ ಇದ್ದೇವೆ" ಇದು ಮೂರನೇ ಲೋಕ ಇಲ್ಲೂ ಭೂಮಿ ಆಕಾಶ ಇದೆ ಎಂದು ಓದುತ್ತೇವೆ.

ಈಗ ನಾವು ದೇವರು ಮೊದಲನೇ ಲೋಕವನ್ನು ಯಾಕೆ ನಾಶ ಮಾಡಿದರು ? ಅದೇ ರೀತಿ ಎರಡನೇ ಲೋಕವನ್ನು ಯಾಕೆ ನಾಶ ಮಾಡುತ್ತಾರೆ ? ಮತ್ತು ಮೂರನೇ ಲೋಕ ಯಾವಾಗ ಬರುತ್ತದೆ ? ಇದರ ಬಗ್ಗೆ ತಿಳಿಯೋಣ.

ಮೊದಲನೆಯದಾಗಿ, **"ಮೊದಲನೇ ಲೋಕ"** ಈ ಲೋಕವನ್ನು ಜಲಪ್ರಳಯದಲ್ಲಿ ನಾಶ ಮಾಡಿದರು ಇದು ಯಾವಾಗ ನಾಶವಾಯಿತು ಎಂದು ನಮಗೆ ಗೊತ್ತಿದೆ ಅದು ನೋಹನ ಕಾಲದಲ್ಲಿ. ಆದ್ದರಿಂದ ಇದು ನೋಹನಿಗಿಂತ ಮುಂಚೆ ಜಲಪ್ರಳಯದ ಮುಂಚೆ ಇದ್ದ ಲೋಕ ಮೊದಲನೇ ಲೋಕ. ದೇವರು ಭೂಮಿಯನ್ನು ಸೃಷ್ಠಿ ಮಾಡುವಾಗ ಮೊದಲು ಏನನ್ನು ಸೃಷ್ಠಿ ಮಾಡಿದರು ಎಂದು ನೋಡೋಣ **ಆದಿಕಾಂಡ 1:1** ರಲ್ಲಿ ಮೊದಲು ಆಕಾಶವನ್ನು ಆಮೇಲೆ ಭೂಮಿಯನ್ನು **ಆದಿಕಾಂಡ 1:8** ರಲ್ಲಿ, ಎರಡನೇ ದಿನ ಆ ಗುಮ್ಮಟಕ್ಕೆ ಆಕಾಶವೆಂದು ಹೆಸರಿಟ್ಟನು. ಇದನ್ನು ಮೊದಲನೇ ದಿನ ಸೃಷ್ಠಿ ಮಾಡಿದರು, ಹಾಗಾದರೆ ಈ ಆಕಾಶ ಯಾವುದು ?
ಆದರೆ **8ನೇ** ವಚನದಲ್ಲಿರುವ ಆಕಾಶ, ಅಂದರೆ ವಾಯು ಮಂಡಲ ಮತ್ತು ಆಗಿನ ಕಾಲದಲ್ಲಿ ಕೆಲವರು ಹೆಚ್ಚುಕಾಲ ಬದುಕುತ್ತಿದ್ದರು ಮೊದಲ ಸ್ಥಾನದಲ್ಲಿ ಮೆತುಷೆಲಹ 969 ವರ್ಷಗಳು, 2ನೇ ಸ್ಥಾನದಲ್ಲಿ ಯೆರೆದನು 962 ವರ್ಷಗಳು, 3ನೇ ಸ್ಥಾನದಲ್ಲಿ ನೋಹ 950 ವರ್ಷಗಳು, 4ನೇ ಸ್ಥಾನದಲ್ಲಿ ಆದಾಮನು 930 ವರ್ಷಗಳು, ಇಷ್ಟು ಆಯುಷ್ಯ ಬರಲು ಕಾರಣವೇನು? ಏನೆಂದರೆ ದೇವರು ಭೂಮಿಯನ್ನು ಅಷ್ಟೊಂದು ಸುಂದರವಾಗಿ ಸೃಷ್ಠಿಸಿದ್ದರು. ಹೇಗೆಂದರೆ ಭೂಮಿಯ ಸುತ್ತಲೂ ರಕ್ಷಣಾ ಕವಚ (Protection Layer) ರೂಪಿಸಿದ್ದರು, ಭೂಮಿಯ ಸುತ್ತಲು 3 ಅಡಿ ದಪ್ಪನಾದ (OZON Layer) ಪದರ ಇದೆ. ಇದು ಸೂರ್ಯನ ಕಿರಣವನ್ನು ಭೂಮಿಗೆ ನೇರವಾಗಿ ಬರುವುದನ್ನು ತಡೆದು ಬಿಡುತ್ತದೆ.

ಇಷ್ಟು ಮಾತ್ರವಲ್ಲದೆ ಭೂಮಿಯ ಸುತ್ತಲೂ ನೀರಿನ ಕವಚ ಇದ್ದುದರಿಂದ ಉಷ್ಣಾಂಶ ತುಂಬಾ ಕಡಿಮೆ ಇತ್ತು. ಆದುದರಿಂದ ಆಗಿನ ಕಾಲದಲ್ಲಿ ಮನೆಗಳಿಗೆ ROOF ಇರುತ್ತಿರಲಿಲ್ಲ. ವಾತಾವರಣ ತುಂಬಾ ತಣ್ಣಗೆ ಇದ್ದುದರಿಂದ ಮನುಷ್ಯರು ದೀರ್ಘಾಯಸ್ಸು ಉಳ್ಳವರಾಗಿದ್ದರು. ಈ ರೀತಿಯಾಗಿ ದೇವರು ಭೂಮಿಯನ್ನು ಸೃಷ್ಠಿಸಿದ್ದರು **ಆದಿಕಾಂಡ 1:6–8.**

ಬಳಿಕ ದೇವರು ಜಲಸಮೂಹಗಳ ನಡುವೆ ವಿಸ್ತಾರವಾದ ಗುಮ್ಮಟ ಉಂಟಾಗಲಿ ಅದು ಕೆಳಗಿನ ನೀರುಗಳನ್ನು ಮೇಲಣ ನೀರುಗಳನ್ನು ಬೇರೆ ಬೇರೆ ಮಾಡಿಲಿ ಅಂದನು. ದೇವರು ವಿಸ್ತಾರವಾದ ಗುಮ್ಮಟವನ್ನು ಉಂಟುಮಾಡಿ ಅದರ ಕೆಳಗಿದ್ದ ನೀರನ್ನು ಅದರ ಮೇಲಿನ ನೀರುಗಳಿಂದ ವಿಂಗಡಿಸಿದನು, ಈ ರೀತಿ ನೀರಿನ ಕವಚವನ್ನು ಉಂಟು ಮಾಡಿದ್ದರು. ಅಂದರೆ ವಾಯು ಮಂಡಲ (ಆಕಾಶ) ಇದರ ಮೇಲೆ ನೀರಿನ ಕವಚ ಉಂಟು ಮಾಡಿದ್ದರು ಇದರಿಂದ ಸೂರ್ಯನ ಕಿರಣ ಶಾಖವಾಗಿ ಬರುತ್ತಿರಲಿಲ್ಲ, ಆಕಾಶವೇ(ವಾಯು ಮಂಡಲ). ಕೆಳಗಿನ ನೀರು ಅಂದರೆ ಸಮುದ್ರ, ಸಾಗರಗಳೇ. ಈ ರೀತಿಯಾಗಿ ದೇವರು ಉಂಟುಮಾಡಿದ್ದರು.
**2ಪೇತ್ರ 3:5** ಅದೇನೆಂದರೆ "ಪೂರ್ವಕಾಲದಲ್ಲಿದ್ದ ಭೂಮಿ, ಆಕಾಶಗಳು ನೀರಿನಿಂದ ಉಂಟಾಗಿ ನೀರಿನಿಂದಲೇ ಆಧಾರ ಗೊಂಡಿರುವಲ್ಲಿ" ಅಂದರೆ ನೀರಿನಿಂದ ಉಂಟಾಗಿ ನೀರಿನಿಂದಲೇ ಆಧಾರವಾಗಿತ್ತು, ಅಂದರೆ ನೀರಿನ ಕವಚವಿತ್ತು ಮತ್ತು ಮಳೆ ಬಿದ್ದಿರಲಿಲ್ಲ,
**ಆದಿಕಾಂಡ 2:5** ಈ ಭೂಮಿಯ ಮೇಲೆ ಮಳೆ ಬಿದ್ದಿರಲಿಲ್ಲ. ಗಿಡ, ಮರಗಳಿಗೆ ಮಂಜು ಬಿದ್ದು ನೆಲವನ್ನೆಲ್ಲಾ ತೋಯಿಸುತ್ತಿತ್ತು"

ಮೊದಲನೇ ಲೋಕದಲ್ಲಿ ಮನುಷ್ಯರು ಆಹಾರಕ್ಕಾಗಿ ಏನನ್ನು ತಿನ್ನುತ್ತಿದ್ದರು ?
**ಆದಿಕಾಂಡ 1:29** "ಇಗೋ ಸಮಸ್ತ ಭೂಮಿಯ ಮೇಲೆ ಬೀಜವುಳ್ಳ ಎಲ್ಲಾ ಪೈರುಗಳನ್ನೂ, ಬೀಜವುಳ್ಳ ಎಲ್ಲಾ ಹಣ್ಣಿನ ಮರಗಳನ್ನೂ ನಿಮಗೆ ಆಹಾರಕ್ಕಾಗಿ ಕೊಟ್ಟಿದ್ದೇನೆ". ಅಂದರೆ ಎಲ್ಲಾ ಮನುಷ್ಯರು ಸಸ್ಯಹಾರಿಗಳಾಗಿದ್ದರು. ಪ್ರಾಣಿಗಳು ಏನ್ನನ್ನು ತಿನ್ನುತಿದ್ದವು ?
**ಆದಿಕಾಂಡ 1:30** ರಲ್ಲಿ ಎಲ್ಲಾ ಕಾಡು ಮೃಗಗಳಿಗೂ, ಎಲ್ಲಾ ಪಕ್ಷಿಗಳಿಗೂ ಹುಲ್ಲು ಸೊಪ್ಪುಗಳೇ ಆಹಾರ, ಯಾವ ಮಾಂಸಹಾರಿ ಇಲ್ಲಾ

ಹಾಗಾದರೆ ಇಂತಹ ಸುಂದರವಾದ ಮೊದಲನೇ ಲೋಕವನ್ನು ದೇವರು ಏಕೆ ನಾಶ ಮಾಡಿದರು ?

ಏಕೆಂದರೆ ಮೊದಲನೇ ಲೋಕದಲ್ಲಿ ದೇವರು ಮೊದಲು ಮನುಷ್ಯರನ್ನು ಕಾಪಾಡಲು ಲೂಸೀಫರ್‌ಗೆ ಅವಕಾಶ ಕೊಟ್ಟಿದ್ದರು, ಆಗ ಲೂಸೀಫರ್ ದೇವರಿಗೆ ವಿರುದ್ಧವಾಗಿ ಏದೇನ್ ತೋಟದಲ್ಲಿ ಪಾಪಿಯಾದನು. ಆಗ ದೇವರು, ಮನುಷ್ಯರು ಇನ್ನೂ ಪಾಪದಲ್ಲಿ ಬೀಳದಂತೆ ಕಾಪಾಡಲೆಂದು ಆಕಾಶದಲ್ಲಿರುವ ದೇವದೂತರಿಗೆ ಅವಕಾಶ ಕೊಟ್ಟರು.

**ಇಬ್ರಿಯರಿಗೆ 2:5** "ನಾವು ಪ್ರಸ್ತಾಪಿಸುವ ಮುಂದಣ ಸಾಮ್ರಾಜ್ಯವನ್ನು ಆತನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ" ಅಂದರೆ ಒಂದು ಕಾಲದಲ್ಲಿ ದೇವದೂತರಿಗೆ ಅಧೀನ ಮಾಡಿದ್ದರು ಎಂದರ್ಥ.

ಉದಾ:– ಸಚಿನ್ ತಂಡೋಲ್ಕರ್ ಇನ್ನು ಮುಂದೆ ಕ್ರಿಕೆಟ್ ಆಡುವುದಿಲ್ಲ ಎಂದರೆ ಅರ್ಥವೇನು ? ಅಂದರೆ ಮೊದಲು ಕ್ರಿಕೆಟ್ ಆಡುತ್ತಿದ್ದ ಇನ್ನೂ ಮೇಲೆ ಆಡುವುದಿಲ್ಲ ಎಂದರ್ಥ. ಅದೇರೀತಿ ಮೇಲಿನ ವಾಕ್ಯದಲ್ಲಿ ಹೇಳಿರುವುದು.

ಹಾಗಾದರೆ ಈ ದೇವದೂತರಿಗೆ ಮೊದಲನೆ ಲೋಕದಲ್ಲಿ ಅವಕಾಶ ಕೊಟ್ಟಿದ್ದರು ಹೇಗೆಂದರೆ, ಅವರು ಆತ್ಮೀಕ ಶರೀರದಲ್ಲಿದ್ದರು ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಆದರೆ ದೇವರು ಮನುಷ್ಯರಿಗೆ ಸಹಾಯ ಮಾಡಲು ಮನುಷ್ಯ ರೂಪದರಿಸಿ ಬಂದು ಮನುಷ್ಯರಿಗೆ ಸಹಾಯ ಮಾಡಲು ಕಾಣಿಸಿಕೊಳ್ಳಲು ವಿಶೇಷ ಶಕ್ತಿ ಕೊಟ್ಟಿದ್ದರು.

ಉದಾ:– ಅಬ್ರಹಾಮನ ಮನೆಗೆ ಮೂರು ಮಂದಿ ಪುರುಷರು ಬಂದಿದ್ದರು. **ಆದಿಕಾಂಡ 18:1,2** ಈ ಮೂರು ಮಂದಿ ಪುರುಷರು ಲೋಟನ ಮನೆಗೆ ಹೋಗುತ್ತಾರೆ. ಆದರೆ ಇವರು ದೇವದೂತರೆಂದು ಯಾರಿಗೂ ಗೊತ್ತಾಗಲಿಲ್ಲ ಏಕೆಂದರೆ ಮನುಷ್ಯನ ರೂಪದಲ್ಲಿ ಬಂದಿದ್ದರು. ಆದ್ದರಿಂದ ದೇವರು ದೇವದೂತರಿಗೆ ಯಾವಾಗ ಬೇಕಾದರೂ ಆತ್ಮೀಕ ಶರೀರ ಧರಿಸಬಹುದು ಮತ್ತು ಮನುಷ್ಯನ ಶರೀರ ಧರಿಸಲೂಬಹುದು ಎಂಬ ವರವನ್ನು ಕೊಟ್ಟಿದ್ದರು.

ಇನ್ನೊಂದು ಉದಾಹರಣೆ **ಆದಿಕಾಂಡ 32:24** ರಲ್ಲಿ ಯಾಕೋಬನು ತಾನು ವಂಟಿಗನಾಗಿ ನಿಂತಿರುವಾಗ ಯಾರೋ ಒಬ್ಬ ಪುರುಷನು ಬೆಳಗಾಗುವ ತನಕ ಅವನ ಸಂಗಡ ಹೋರಾಡಿದನು. **ಆದಿಕಾಂಡ 32:26** ರಲ್ಲಿ ಯಾಕೋಬನಿಗೆ ಇವರು ದೇವದೂತ ಎಂಬುದಾಗಿ ತಿಳಿದು "ನೀನು ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಬಿಡುವುದಿಲ್ಲ ಅಂದನು".

ಮತ್ತೊಂದು ಕಡೆ ಸಿಂಸೋನನ ತಂದೆ ತಾಯಿಗೂ ಕಾಣಿಸಿಕೊಳ್ಳುತ್ತಾರೆ. ಆದ್ದರಿಂದ ದೇವದೂತರಿಗೆ ಇಂತಹ ಅವಕಾಶ ಕೊಟ್ಟಾಗ ಅವರು ಒಂದು ದೊಡ್ಡ ತಪ್ಪನ್ನು ಮಾಡಿದರು, ಏನೆಂದರೆ ದೇವದೂತರು ಮಾಂಸ ಶರೀರದಲ್ಲಿ ಭೂಲೋಕಕ್ಕೆ ಬಂದು ಮನುಷ್ಯರಿಗೆ ಸಹಾಯ ಮಾಡಲು ಅವರೊಂದಿಗೆ ವ್ಯವಹರಿಸುವಾಗ ಮನುಷ್ಯ ಪುತ್ರಿಯರ ಸೌಂದರ್ಯಕ್ಕೆ ಮಾರುಹೋಗಿ ಅವರ ಜೊತೆ ಸಂಬಂಧ ಬೆಳೆಸಲು ಶುರುಮಾಡಿದರು

**ಆದಿಕಾಂಡ 6:1** "ಭೂಮಿಯ ಮೇಲೆ ಜನರು ಹೆಚ್ಚುತ್ತಾ ಅವರಿಗೆ ಹೆಣ್ಣು ಮಕ್ಕಳು ಹುಟ್ಟಲು ದೇವಪುತ್ರರು ಮನುಷ್ಯ ಪುತ್ರಿಯರ ಸೌಂಧರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು". ಅಂದರೆ "ಆ ಕಾಲದಲ್ಲಿ ದೇವಪುತ್ರರು ಮನುಷ್ಯ ಪುತ್ರಿಯರನ್ನು ಕೂಡಿ ಅವರಲ್ಲಿ ಮಕ್ಕಳನ್ನು ಪಡೆಯುವ ಕಾಲದಲ್ಲಿ ಮಹಾ ಶರೀರಗಳು ಭೂಮಿಯ ಮೇಲಿದ್ದವು, ಅನಂತರದಲ್ಲಿಯೂ ಇದ್ದರು ಪೂರ್ವದಲ್ಲಿ ಹೆಸರುಗೊಂಡ ಪರಾಕ್ರಮಶಾಲಿಗಳು ಇವರೇ"

**ಆದಿಕಾಂಡ 6:4.** ಅಂದರೆ ದೇವದೂತರಿಗೂ ಮನುಷ್ಯ ಪುತ್ರಿಯರಿಗೂ ಹುಟ್ಟಿದ ಮಕ್ಕಳೇ ರಾಕ್ಷಸರು. ಇವರು ಸುಮಾರು 30 ರಿಂದ 40 ಅಡಿ ಎತ್ತರವಾಗಿ ವಿಕಾರವಾಗಿದ್ದರು. ಉದಾ:ಹರಣೆ:– ರಾವಣ, ಕುಂಭಕರಣ, ಅರ್ಕ್ಯುಲೇಸ್ ಮುಂತಾದವರು.

ಆ ಮೇಲೆ ಇವರೆಲ್ಲರ ರಾಕ್ಷಸ ಸಂತತಿ ಹೇಗೆ ನಾಶವಾಯಿತೆಂಬದು ಗೊತ್ತಿಲ್ಲ, ಆದರೆ ಸತ್ಯವೇದದಲ್ಲಿ ಇದರ ಬಗ್ಗೆ ಉತ್ತರ ಇದೆ. ಈ ರಾಕ್ಷಸರು ಹೇಗಿದ್ದರು ಅಂದರೆ ಇವರಿಗೆ ತಮ್ಮ ತಂದೆಯಿಂದ ಜೀವ ಬಂದಿತ್ತು. ಮಾತ್ರವಲ್ಲ ಇವರಿಗೆ ದೇವದೂತರಿಗೆ ಇದ್ದಂತ ಶಕ್ತಿ ಮಾತ್ರ ಇತ್ತು, ಆದರೆ ಪುನಃ ಜೀವವನ್ನು ಪಡೆದುಕೊಳ್ಳುವ ಶಕ್ತಿ ಮತ್ತು ಅಧಿಕಾರ ಇರಲಿಲ್ಲ. ದೇವದೂತರಿಗೆ ದೇವರು ಮದುವೆಮಾಡಿಕೊಳ್ಳುವ ಅವಕಾಶ ಕೊಟ್ಟಿರಲಿಲ್ಲ.

**ಮತ್ತಾಯ 22:30** "ಪುನರುತ್ಥಾನವಾದ ಮೇಲೆ ಮದುವೆ ಮಾಡಿಕೊಳ್ಳುವುದು ಇಲ್ಲಾ, ಮದುವೆ ಮಾಡಿಕೊಡುವುದು ಇಲ್ಲಾ ಪರಲೋಕದಲ್ಲಿರುವ ದೇವದೂತರಂತೆ ಇರುತ್ತಾರೆ" ಆದುದರಿಂದ ಇದು ದೇವರ ಚಿತ್ತಕ್ಕೆ ವಿರುದ್ಧವಾಗಿ ಮಾಡಿರುವ ತಪ್ಪು.

**ಯೂದಾ 7ನೇ** ವಾಕ್ಯದಲ್ಲಿ ಸೊದೋಮ್ ಗೊಮೊರ ಪಟ್ಟಣದವರು ಅವುಗಳ ಸುತ್ತಮುತ್ತಣ ಪಟ್ಟಣದವರು ಆ ದೂತರಂತೆ ನಡೆದುಕೊಂಡು ತಮ್ಮನ್ನು ಜಾರತ್ವಕ್ಕೆ ಒಪ್ಪಿಸಿಬಿಟ್ಟು ಅಂದರೆ ದೂತರಂತೆ ಇವರು ಸಹ ಪಾಪ ಮಾಡಿದರು. ಆ ದೂತರು ಸಹ ಸ್ವಭಾವಕ್ಕೆ ವಿರುದ್ಧವಾದ ಪಾಪ ಮಾಡಿದ್ದಾರೆಂದು ತಿಳಿಯುತ್ತದೆ. ಈ ಕಾರಣದಿಂದ ದೇವರು ಸೊದೋಮ್ ಗೊಮೊರ ಪಟ್ಟಣವನ್ನು ನಾಶ ಮಾಡಿದರು. ಮಾತ್ರವಲ್ಲದೆ ದೇವದೂತರಿಂದ ಹುಟ್ಟಿದ ರಾಕ್ಷಸ ಮಕ್ಕಳು ಸಾಮಾನ್ಯ ಮನುಷ್ಯರ ಮೇಲೆ ದಬ್ಬಾಳಿಕೆ ಮಾಡಲು ಶುರು ಮಾಡಿದರು. ಆಗ ಲೋಕ ಕೆಟ್ಟು ಹೋಯಿತು

**ಆದಿಕಾಂಡ 6:5.** "ಮನುಷ್ಯರ ಕೆಟ್ಟತನ ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರು ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಬರೀ ಕೆಟ್ಟದಾಗಿರುವುದನ್ನು ಯೆಹೋವ ದೇವರು ನೋಡಿ ಮನುಷ್ಯರನ್ನು ಉಂಟು ಮಾಡಿದ್ದಕ್ಕೆ ಪಶ್ಚಾತ್ತಾಪ ಪಟ್ಟರು. ಅದಕ್ಕಾಗಿ ದೇವರು ನೋಹನಿಗೆ ಒಂದು ನಾವೆಯನ್ನು ಕಟ್ಟು ಈ ಲೋಕವನ್ನು ನಾಶ ಮಾಡುವೆನು ಎಂದು ಹೇಳಿದರು.

**ಆದಿಕಾಂಡ 6:3** " ಆಗ ಯೆಹೋವನು ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವುದಿಲ್ಲ ಅವರು ಭ್ರಷ್ಟರಾದುದರಿಂದ ಮರ್ತ್ಯರೇ". ಅವರ ಕಾಲ 120 ವರ್ಷವಾಗಿರಲಿ, ಅಂದರೆ 120 ವರ್ಷದೊಳಗೆ ಎಲ್ಲಾ ಜೀವಗಳಿಗೆ ಮರಣವನ್ನು ಉಂಟು ಮಾಡುವೆನು ಎಂದು ಹೇಳಿದಂತಾಯಿತು.

ಇಲ್ಲಿ ನೋಹನನ್ನು ಅವನ ಮನೆಯವರಲ್ಲಿ 7 ಮಂದಿಯನ್ನು ಆರಿಸಿಕೊಂಡರು ಯಾಕೆ ?

**ಆದಿಕಾಂಡ 6:9** "ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು". ಅಂದರೆ ನೀತಿವಂತನು ಮಾತ್ರವಲ್ಲ ಇವರ ಕುಟುಂಬದಲ್ಲಿ ಆ ದೇವದೂತರ ಸಂಬಂಧ ಇಟ್ಟುಕೊಂಡಿರಲಿಲ್ಲಾ. ಮಾತ್ರವಲ್ಲದೆ ದೇವದೂತರಂತೆ ಪಾಪದಲ್ಲಿ ಪಾಲು ತೆಗೆದುಕೊಂಡಿರಲಿಲ್ಲ. ಈ ಕಾರಣದಿಂದ ದೇವರು ನೋಹನನ್ನು ಅವರ ಕುಟುಂಬವನ್ನು ಕಾಪಾಡಿದರು.

ನೋಹನು ನಾವೆಯನ್ನು ಎಷ್ಟು ವರ್ಷಗಳಲ್ಲಿ ಕಟ್ಟಿದರು ?

120 ವರ್ಷಗಳು ಮಾತ್ರ. ಅಂದರೆ ಇನ್ನು ಮೇಲೆ ಮನುಷ್ಯನ ಆಯುಷ್ಯ 120 ವರ್ಷಗಳು, ಇದು ಅವನಿಗೆ ಕೊಟ್ಟಿರುವ ಸಮಯವೇ ಆಗಿದೆ. ನೋಹ 120 ವರ್ಷ ನಾವೆಯನ್ನು ಕಟ್ಟಬೇಕಾದರೆ ಎಂತಹ ಶೋಧನೆಗಳು ಬಂದಿರಬಹುದು, ಇವರ ಜೊತೆ 7 ಮಂದಿ ಮಾತ್ರ ಇದ್ದರು. 120 ವರ್ಷವೂ ತಾಳ್ಮೆಯಿಂದ, ನಂಬಿಕೆಯಿಂದ ಕಟ್ಟಿದರು. ನಾವೇನಾದರು ಆಗಿದ್ದಿದ್ದರೆ ಇನ್ನೂ ಸಮಯ ಬೇಕಾದರೂ ನೋಡೋಣ ಎಂದು ತಾತ್ಸಾರ ಮಾಡುತ್ತಿದ್ದೆವು.

ನೋಹ ಈ ನಾವೆಯನ್ನು ಏತಕ್ಕಾಗಿ ಕಟ್ಟಿದರು ?

ಏಕೆಂದರೆ ದೇವರು ನೋಹನಿಗೆ ಹೇಳಿದ್ದು, ಜಲಪ್ರಳಯದ ಮೂಲಕ ಇಡೀ ಲೋಕವನ್ನು ನಾಶ ಮಾಡುತ್ತೇನೆ, ಮುಂದೆ ಎಲ್ಲಾ ಪ್ರಾಣಿ, ಪಕ್ಷಿಗಳ ಸಂತತಿ ಉಳಿಸಲು ಕೆಲವನ್ನು ನಾವೆಯಲ್ಲಿ ರಕ್ಷಿಸಬೇಕು ಎಂದು ಹೇಳಿದ್ದರು. ನೋಹ ಮಳೆಯನ್ನು ಎಂದೂ ನೋಡಿರಲಿಲ್ಲ ಹೇಗೆ ನಂಬಿದ, ಅಷ್ಟೇ ಅಲ್ಲ ಆ ಪಟ್ಟಣದ ಜನರು ನೋಹನ ಮಾತನ್ನು ಕೇಳಿ ಇವನನ್ನು ಹುಚ್ಚನೆಂದು ಹೇಳಿರಬೇಕು, ಎಷ್ಟೊಂದು ಹಾಸ್ಯ ಮಾಡಿರಬೇಕು. 120 ವರ್ಷಗಳ ಕಾಲ ಆತನನ್ನು ಎಷ್ಟು ಹಾಸ್ಯ ಮಾಡಿದರು ನೋಹಾನ ನಂಬಿಕೆ, ತಾಳ್ಮೆ ಹೇಗಿದ್ದಿರಬೇಕು.

ದೇವರು ನೋಹನಿಗೆ ಎಷ್ಟೆಷ್ಟು ಪ್ರಾಣಿಗಳನ್ನು ನಾವೆಯಲ್ಲಿ ಸೇರಿಸಲು ಹೇಳಿದ್ದರು ?

**ಆದಿಕಾಂಡ 7:2,3** "ಎಲ್ಲಾ ಶುದ್ಧ ಪಶುಗಳಲ್ಲಿ ಏಳೇಳು ಗಂಡು ಹೆಣ್ಣುಗಳನ್ನು, ಶುದ್ಧವಲ್ಲದ ಪಶುಗಳಲ್ಲಿ ಎರಡೆರಡು ಗಂಡು ಹೆಣ್ಣುಗಳನ್ನು ನಿನ್ನೊಂದಿಗೆ ತೆಗೆದುಕೊ ಎಂದಿದ್ದರು". ಶುದ್ಧವಾದವುಗಳನ್ನು ಏಕೆ ಏಳೇಳುಗಳನ್ನು ತೆಗೆದುಕೊಳ್ಳಬೇಕು ? ಏಕೆಂದರೆ ನೋಹ ದೇವರಿಗೆ ಯಜ್ಞಗಳನ್ನು ಸಲ್ಲಿಸಲು ಬೇಕಾಗಿತ್ತು ಇವುಗಳ ಸಂಖ್ಯೆ ಕಡಿಮೆಯಾಗಬಾರದು ಎಂದು ಹಾಗೆ ಹೇಳಿದ್ದಾರೆ. ಆಮೇಲೆ ಎಲ್ಲಾ ಪ್ರಾಣಿ ಪಕ್ಷಿಗಳನ್ನು ನಾವೆಯಲ್ಲಿ ಸೇರಿಸಿದ ಮೇಲೆ 40 ದಿನ ಅಗಲಿರುಳು ಭೂಮಿಯ ಮೇಲೆ ಮಳೆ ಸುರಿಯಿತು. **ಆದಿಕಾಂಡ 7:12**

ಅಂದರೆ ಮೊದಲನೇ ಲೋಕದಲ್ಲಿ ಮಳೆ ಬಂದಿರಲಿಲ್ಲಾ, ಹಾಗಾದರೆ ಆ ಸಮಯದಲ್ಲಿ ಮಳೆ ಬರುಲು ಹೇಗೆ ಸಾಧ್ಯ ?

**ಆದಿಕಾಂಡ 7:11** ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು, ಆಕಾಶದ ತೂಬುಗಳು ಹೊಡೆದವು, ಅಂದರೆ ಆಕಾಶದ ಮೇಲಿದ್ದ ನೀರಿನ ಕವಚವನ್ನು ಹೊಡೆದು ಬಿಟ್ಟರು, ಆಗ ಆಕಾಶದಲ್ಲಿದ್ದ ಎಲ್ಲಾ ನೀರು ಭೂಮಿಯ ಮೇಲೆಲ್ಲಾ ಭಯಂಕರವಾಗಿ ಸುರಿಯಿತು. ಪರ್ವತಗಳು ಮುಳುಗುವಷ್ಟು ನೀರು ತುಂಬಿ ಮೊದಲನೇ ಲೋಕ ನೀರಿನಿಂದ ನಾಶವಾಯಿತು. ಇದನ್ನೇ **2ಪೇತ್ರ 3:6** ವಾಕ್ಯದಲ್ಲಿ ಹೇಳಿರುವ ಅರ್ಥ.

ಈಗ ಒಂದು ಲೋಕವನ್ನು ನಾಶ ಮಾಡಿದರು ಎಂದರೆ ಏನು ಅರ್ಥ ?

ಏನೆಂದರೆ, ಮೊದಲನೇ ಲೋಕದ ಭೂಮಿಯ ಮೇಲಿರುವ ಎಲ್ಲಾ ಮನುಷ್ಯ, ಪ್ರಾಣಿ, ಪಕ್ಷಿಗಳೆಲ್ಲವು ನಾಶವಾದವು, ಅಂದರೆ ನೋಹನ ನಾವೆಯಲ್ಲಿರುವವರನ್ನು ಬಿಟ್ಟು ಮಿಕ್ಕೆಲ್ಲಾ ನಾಶವಾಯಿತು. ಅಲ್ಲಿದ್ದಂತ ದೇವದೂತರು ಎಲ್ಲಿ ಹೋದರು ? ಅಂದರೆ

ದೇವದೂತರು ಮಾಂಸದಲ್ಲಿರುವ ಸಮಯದಲ್ಲಿ ಜಲಪ್ರಳಯ ಬರುವುದನ್ನು ನೋಡಿ ಆತ್ಮೀಕ ಶರೀರರೂಪ ತಾಳಿ ತಪ್ಪಿಸಿಕೊಂಡರು ಹೀಗಿರುವುದರಿಂದ ಅವರು ನಾಶವಾಗಲಿಲ್ಲಾ. **2ಪೇತ್ರ 2:4** "ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವುದಕ್ಕಾಗಿ ಕತ್ತಲೆ ಗುಂಡಿಗೆ ಒಪ್ಪಿಸಿದರು".

ಹಾಗಾದರೆ ದೇವರು ದೇವದೂತರನ್ನು ಪರಲೋಕಕ್ಕೂ ಸೇರಿಸಿಕೊಳ್ಳಲಿಲ್ಲಾ ಮತ್ತು ಮನಃ ಭೂಲೋಕಕ್ಕೆ ಮಾಂಸಿಕ ಶರೀರದಲ್ಲಿ ಬರುವ ಅವಕಾಶ ಕೊಡಲಿಲ್ಲ, ಹೀಗಿರುವುದರಿಂದ ಈಗ ವಾಯು ಮಂಡಲದಲ್ಲಿ ಕಟ್ಟಿಹಾಕಿದ್ದಾರೆ. ಇವರಿಗೆ ಯಜಮಾನ ಅಧಿಪತಿ ಯಾರು? **ಎಫೇಸ 2:2** ನೀವು ಪೂರ್ವದಲ್ಲಿ ಅಪರಾದಗಳನ್ನು ಪಾಪಗಳನ್ನು ಮಾಡುವವರಾಗಿದ್ದು, ಇಹಲೋಕ್ಕಾಚ್ಚಾರಕ್ಕನುಸಾರವಾಗಿ ನಡೆದುಕೊಂಡಿರಿ. ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ನಂಬಲೊಲ್ಲದವರನ್ನು ಈಗ ಅವಿಧೇಯತೆ ಪ್ರೇರೇಪಿಸುವ ಆತ್ಮನಿಗೆ (LOOSIFER) ಸೈತಾನ ಇವನೇ. ಇವನು ಎಲ್ಲಿ ಅಧಿಪತಿ? ಯಾರ ಮೇಲೆ? ಅಂದರೆ ಇವನು ಭೂಲೋಕದ ಅಧಿಪತಿ. ಯಾರಮೇಲೆಂದರೆ ಬಿದ್ದು ಹೋದ ದೇವದೂತರ ಮೇಲೆ. ಹೀಗೆ ಮೊದಲನೇ ಲೋಕ ನಾಶವಾಯಿತು.
ಆಮೇಲೆ ನೋಹ 1ವರ್ಷ 1ತಿಂಗಳು 15ನೇ ದಿನವಾದ ಮೇಲೆ ಅರಾರಥ್ ಬೆಟ್ಟದ ಮೇಲೆ ದೋಣಿ ಬಂದು ನಿಂತುಕೊಳ್ಳುತ್ತದೆ. ಅವರೆಲ್ಲರೂ ಹೊರಗೆ ಬಂದ ಮೇಲೆ ದೇವರು ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ.
**ಆದಿಕಾಂಡ 9:13** ಮೇಘಗಳಲ್ಲಿ ನಾನಿಟ್ಟಿರುವ ಮುಗಿಲು ಬಿಲ್ಲೆ ನಿನಗೆ ಗುರುತಾಗಿರುವುದು, ನನಗೂ ಈ ಭೂಪ್ರಾಣಿಗಳಿಗೂ (ಮನುಷ್ಯರಿಗೂ) ಆದ ಒಡಂಬಡಿಕೆಗೆ ಇದೇ ಗುರುತು. ಕಾಮನ ಬಿಲ್ಲು ನೋಡಿದ ತಕ್ಷಣ ನಾವು ಜಲಪ್ರಳಯವನ್ನು ನೆನೆಸಿಕೊಳ್ಳಬೇಕು. ದೇವರು ನೋಹನೊಂದಿಗೆ ಒಡಂಬಡಿಕೆ ಮಾಡಿದ್ದಾರೆ ಎಂದು ಹೀಗೆ ನೋಹನು ದೇವರಿಗೆ ಯಜ್ಞಗಳನ್ನು ಸಲ್ಲಿಸಿ ಯತಾಃಪ್ರಕಾರ ತನ್ನ ಜೀವನ ಶೈಲಿಯನ್ನು ಪ್ರಾರಂಭಿಸಿದನು.

ಅಂದರೆ ಸತ್ಯವೇದ ಬೋಧಿಸುವುದೇನೆಂದರೆ ಮೊದಲನೇ ಲೋಕ ನಾಶವಾಯಿತು, ಆದರೆ ಭೂಮಿ ನಾಶವಾಗಲಿಲ್ಲ ಹಾಗಾದರೆ ನಾಶವಾದ್ದೇನು? ಭೂಮಿಯಲ್ಲಿರುವ ಎಲ್ಲಾ ಕಾರ್ಯ ಕೆಲಸಗಳು, ಪ್ರಾಣಿ ಪಕ್ಷಿಗಳು, ಮನುಷ್ಯರನ್ನು ಸಹಿತವಾಗಿ ನಾಶ ಮಾಡಿದರು.
**ಪ್ರಸಂಗಿ 1:4**

ಹಾಗಾದರೆ ಭೂಮಿ ಆಕಾಶ ಎಂದರೆ ಅರ್ಥ ಏನು?
ಅಂದರೆ ಭೂಮಿಯಲ್ಲಿ ಮೊದಲು ದೊರೆತನ ಮಾಡುತ್ತಿದ್ದಂತ ರಾಕ್ಷಸರು ಅವನ ಸೇವಕರು ಇವರು ಭೂಮಿಗೆ ಹೋಲಿಕೆಯಾಗಿದ್ದಾರೆ (ಲೋಕಕ್ಕೆ). **ಯೋಹಾನ 3:16** ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಇದರ ಅರ್ಥವೇನು? ದೇವರು ಲೋಕದಲ್ಲಿರುವ ಬೆಟ್ಟ, ಗುಡ್ಡ, ಮರಗಳು ಇವುಗಳನ್ನು ಪ್ರೀತಿಮಾಡಿ ತನ್ನ ಒಬ್ಬನೇ ಮಗನನ್ನು ಕೊಟ್ಟರಾ? ಇಲ್ಲಾ ಮನುಷ್ಯರನ್ನು ಇದೇ ತರಹ ಪೂರ್ವಕಾಲದಲ್ಲಿ ಲೋಕ ಅಂದರೆ ಆಕಾಲದಲ್ಲಿದ್ದ ಆಳ್ವಿಕೆಯನ್ನು ನಾಶ ಮಾಡಿದರು.

ಆಕಾಶವೆಂದರೇನು?
ಅದರಲ್ಲಿ ದೇವದೂತರು ಆಳುತ್ತಿದ್ದರು ಈ ಆಳ್ವಿಕೆಯನ್ನು ನಾಶಮಾಡಿದರು ಮತ್ತು ದೇವದೂತರು ಭೂಮಿಗೆ ಬರುತ್ತಾ ಹೋಗುತ್ತಾ ಇದ್ದರು ಹೀಗೆ ಬರುತ್ತಾ ಹೋಗುತ್ತಾ ಇದ್ದಂತ ಸ್ಥಿತಿಯನ್ನು ನಾಶಮಾಡಿದರು. ಯೇಸು ಹೇಳಿದ್ದು, "ಭೂಮಿ ಆಕಾಶ ಅಳಿದು ಹೋದರು ನನ್ನ ವಾಕ್ಯ ಅಳಿದುಹೋಗಲಾರದು". ಆಕಾಶವೆಂದರೆ ಇಂಗ್ಲೀಷ್ ಬೈಬಲ್‌ನಲ್ಲಿ (ಪರಲೋಕ Heven) ಗೆ 3 ರೀತಿಯಾದ ಅರ್ಥ ಬರುತ್ತದೆ. 1) ವಾಯುಮಂಡಲ ಇದಕ್ಕೂ ಬೈಬಲ್‌ನಲ್ಲಿ **"Heven" ಪರಲೋಕ** ಎಂದು ಕರೆಯಲಾಗಿದೆ. 2) ಗ್ರಹಗಳು ನಕ್ಷತ್ರಗಳು ಇರುವ ಜಾಗಕ್ಕೂ **"Heven" ಪರಲೋಕ** ಎಂದು ಕರೆಯಲಾಗಿದೆ. 3) ತಂದೆ ದೇವರು ವಾಸವಾಗಿರುವ ಸ್ಥಳಕ್ಕೂ **"Heven" ಪರಲೋಕ** ಎಂದು ಕರೆಯುವರು.

– – – – – – –

# ಮೂರು ಲೋಕಗಳು

## ಭಾಗ – 2

ಪ್ರೀತಿಯ ಸಹೋದರ ಸಹೋದರಿಯರೇ, ನಾವು ಹಿಂದಿನ ಪಾಠದಲ್ಲಿ 3 ಲೋಕಗಳು ಎಂಬ ಒಂದು ಆಧಾರದ ಮೇಲೆ ಪಾಠವನ್ನು ಪ್ರಾರಂಭಿಸಿದೆವು ಇದು ಒಂದು ಮಾರ್ಗ, ಈಗೆ ಅನೇಕ ರೀತಿಯಲ್ಲಿ ಸತ್ಯವೇದವನ್ನು ಅರ್ಥಮಾಡಿಕೊಳ್ಳಲಿಕ್ಕೆ ವಿವಿಧ ರೀತಿಯ ನಮೂನೆಗಳಲ್ಲಿ ಅರ್ಥಮಾಡಿಕೊಳ್ಳ ಬಹುದು. **ಉದಾ :–** ಚಿಹ್ನೆಗಳ, ಕನಸುಗಳ ಮತ್ತು ಪ್ರವಾದನೆಯ ರೂಪದಲ್ಲಿ ಬರೆದಿದೆ.

ಚಿಹ್ನೆಗಳ ರೂಪದಲ್ಲಿ ಎಂದರೆ :– ಪ್ರಕಟಣೆ 12:1–6 ರವರೆಗೆ ನೋಡುವಾಗ ಅಲ್ಲಿ ಬರುವ ಸ್ತ್ರೀ ಅಂದರೆ ಯಾರು? ಆಕೆಯ ತಲೆಯ ಮೇಲೆ ಸೂರ್ಯನನ್ನು ಧರಿಸಿಕೊಂಡು 12 ನಕ್ಷತ್ರವುಳ್ಳ ಕಿರೀಟ ಕರಿಸಿದ್ದಳು, ಕಾಲುಗಳ ಕೆಳಗೆ ಚಂದ್ರನಿದ್ದನು ಇವೆಲ್ಲಕ್ಕೂ ಅರ್ಥವೇನು 5ನೇ ವಾಕ್ಯದಲ್ಲಿ ಆಕೆ ಒಂದು ಗಂಡು ಮಗುವನ್ನು ಹೆತ್ತಳು ಅದು ಪಕ್ಕನೆ ದೇವರ ಬಳಿಗೂ, ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು ಎಂದು ಬರೆದಿದೆ. ಇದನ್ನು ಅನೇಕರು ತಪ್ಪಾಗಿ ಅರ್ಥಮಾಡಿಕೊಂಡು ಆ ಸ್ತ್ರೀ ಮೇರಿ ಎಂದೂ, ಆ ಕೂಸು ಯೇಸು ಕ್ರೀಸ್ತನೆಂದು ಹೇಳುತ್ತಾರೆ, ಹಾಗಾದರೆ ಮೇರಿ ಯಾವಾಗ ಸೂರ್ಯನನ್ನು ಧರಿಸಿದ್ದಳು, ಕಾಲುಗಳ ಕೆಳಗೆ ಚಂದ್ರ ಯಾವಾಗ ಹೋದನು ಆಗ ಮೇರಿ ಅರಣ್ಯಕ್ಕೆ ಯಾವಾಗ ಹೋದಳು? ಇದೆಲ್ಲಾ ನೇರವಾದ ಭಾಷೆಯಾಗಿದೆಯಾ? ಅಲ್ಲ "ಚಿಹ್ನೆಗಳ ರೂಪ" ಸೂಚನಾ ರೂಪದಲ್ಲಿ ಬರೆದಿದೆ ಇದಕ್ಕೆಲ್ಲಾ ಸತ್ಯವೇದದಲ್ಲಿಯೇ ಉತ್ತರ ಇದೆ.

ಅದೇ ರೀತಿ ದರ್ಶನಗಳ ರೂಪದಲ್ಲಿ ಬರೆದಿದೆ ಉದಾ:–**ಜಕರ್ಯ** 6:8 ರಲ್ಲಿ 2 ಬೆಟ್ಟಗಳು ಆ ಬೆಟ್ಟಗಳ ನಡುವೆ 4 ರಥಗಳು ಬಂದವು ಆ 2 ಬೆಟ್ಟಗಳು ತಾಮ್ರದ ಬೆಟ್ಟಗಳು ಆ 4 ರಥಗಳಿಗೆ 4 ರೀತಿಯ ಬಣ್ಣ ಬಣ್ಣದ ಕುದುರೆಗಳು ಕಟ್ಟಿದ್ದವು ಎಂದು ಬರೆದಿದೆ. ನಾವು ನೋಡುವಾಗ ತಾಮ್ರದ ಬೆಟ್ಟಗಳು ಎಲ್ಲಾದರೂ ಇರಲು ಸಾಧ್ಯವಾ? ಇಲ್ಲ, ಹಾಗಾದರೆ ಇಲ್ಲಿ ತಾಮ್ರ ಅಂದರೇನು? ಬೆಟ್ಟವೆಂದರೇನು? ರಥಗಳು, ಕುದುರೆಗಳು ಅಂದರೇನು? ಇವೆಲ್ಲಕ್ಕೂ ಸೂತ್ರಗಳನ್ನು ಹಾಕಿದರೆ ಇದರ ಅರ್ಥ ತಿಳಿಯುತ್ತದೆ. ಸೂತ್ರಗಳನ್ನು ಬೇರಲ್ಲೂ ಹುಡುಕುವ ಅವಶ್ಯಕತೆ ಇಲ್ಲ ಸತ್ಯವೇದದಲ್ಲಿಯೇ ಕೊಟ್ಟಿದೆ.

ಅದೇ ರೀತಿ ಈ ಒಂದು ಮೂರುಲೋಕ ಎಂಬ TOPIC ತೆಗೆದುಕೊಂಡು TOPICAL STUDY ಎಂಬ ಮಾರ್ಗದಲ್ಲಿ ಪಾಠ ಮುಂದುವರೆಸೋಣ. ಕಳೆದ ವಾರ ಈ ಮೂರು ಲೋಕಗಳ ಬಗ್ಗೆ ಒಂದೇ ಅಧ್ಯಾಯದಲ್ಲಿ **2ಪೇತ್ರ** 3:5–13 ರ ವರೆಗೆ ನೋಡಿದೆವು ಇವುಗಳ ಬಗ್ಗೆ ಸತ್ಯವೇದದಲ್ಲಿ ವಾಕ್ಯಗಳ ಮುಖಾಂತರ ಮೊದಲನೇ ಲೋಕ ಇತ್ತು, ಅದನ್ನು ಜಲಪ್ರಳಯದ ಮೂಲಕ ನಾಶ ಮಾಡಿದರು, ಕಾರಣ ದೇವದೂತರ ಮೂಲಕ ಉಂಟಾದ ರಾಕ್ಷಸರು ಇವರ ಮೂಲಕ ಎಲ್ಲಾ ಜನರು ದುಷ್ಟಜನರಾಗಿ ಅವರು ಯೋಚಿಸುವುದೆಲ್ಲಾ ಕೆಟ್ಟದ್ದಾಗಿತ್ತು. ಅದಕ್ಕೆ ದೇವರು ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚತ್ತಾಪಪಟ್ಟು ನಾಶ ಮಾಡಿದರು ಅಂತ ಅನೇಕ ವಾಕ್ಯಗಳ ಆಧಾರದಿಂದ ನೋಡಿದೆವು.

ಹೀಗಿರುವುದರಿಂದ ಮೊದಲನೇ ಲೋಕ ಅಂದರೆ ಭೂಮಿ, ಆಕಾಶ ಸೇರಿ ನಾಶ ಮಾಡಿದರು, ಅಂದರೆ ಕಣ್ಣಿಗೆ ಕಾಣದ ರೀತಿಯಲ್ಲಿ ದೇವದೂತರು ಆಳ್ವಿಕೆ ಮಾಡುತ್ತಿದ ಆಕಾಶ, ಭೂಮಿಯಲ್ಲಿದ್ದ ರಾಕ್ಷಸರು ಅವರ ಕ್ರಿಯಗಳನ್ನು ನಾಶ ಮಾಡಿದರು.

ಮುಂದುವರೆಯುತ್ತಾ ನಾವು 2ನೇ ಲೋಕದಲ್ಲಿ ನೋಹ ದೋಣಿಯಿಂದ ಹೊರಗೆ ಬಂದ ಮೇಲೆ ದೇವರಿಗೆ ಬಲಿಗಳನ್ನು ಸಲ್ಲಿಸುತ್ತಾನೆ. ಆ ಮೇಲೆ ದೇವರು ಅವನ ಜೊತೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಅದೇನೆಂದರೆ ನಾನು ಇನ್ನೂ ಮುಂದೆ ನೀರಿನಿಂದ ಈ ಲೋಕವನ್ನು ನಾಶ ಮಾಡುವುದಿಲ್ಲ ಅದಕ್ಕೆ ಗುರುತೇನೆಂದರೆ ನಾನು ಭೂಮಿಯ ಮೇಲೆ ಮಳೆ ಸುರಿಸುವಾಗ ಕಾಮನ ಬಿಲ್ಲು (ಮುಗಿಲು ಬಿಲ್ಲು) ಉಂಟಾಗಲಿ ಇದೇ ಗುರುತಾಗಿರಲಿ ಎಂದು ಒಡಂಬಡಿಕೆ ಮಾಡಿದರು.

ಆ ಮೇಲೆ ನೋಹನು ಎಂದಿನಂತೆ ಮೊದಲನೇ ಲೋಕದಲ್ಲಿ ಯಾವ ಕೆಲಸ ಮಾಡುತ್ತಿದ್ದನೋ ಅದೇ ಕೆಲಸವನ್ನು ಮುಂದುವರೆಸುತ್ತಾನೆ
ಅಂದರೆ ಮೊದಲು ವ್ಯವಸಾಯಗಾರನಾಗಿದ್ದ, ಮೊದಲನೇ ಲೋಕದಲ್ಲಿ ದ್ರಾಕ್ಷೇತೋಟವನ್ನು ವ್ಯವಸಾಯ ಮಾಡುತ್ತಿದ್ದನು, ಈಗಲೂ ಅದೇ ಕೆಲಸವನ್ನು ಮಾಡುತ್ತಾನೆ. **ಆದಿಕಾಂಡ** 2:20 ನೋಹ ವ್ಯವಸಾಯಗಾರನಾಗಿದ್ದನು. 2ನೇ ಲೋಕದಲ್ಲಿ ದೇವರು ನಾನು

ನಿಮಗೆ ಆಹಾರಕ್ಕಾಗಿ ಪೈರುಗಳನ್ನು ಕೊಟ್ಟಂತೆ ಎಲ್ಲಾ ಜೀವ ಜಂತುಗಳನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ ಎಂದು ಹೇಳಿ ರಕ್ತವನ್ನು ಸೇವಿಸಬಾರದು ಅದು ಜೀವವಷ್ಟೇ ಎಂದು ಹೇಳಿದರು. **ಆದಿಕಾಂಡ 9:3**

ಒಂದು ದಿನ ನೋಹ ದ್ರಾಕ್ಷೇಹಣ್ಣಿನಿಂದ ರಸವನ್ನು ತೆಗೆದು ಅದನ್ನು ಕುಡಿಯಲು ಅಮಲುಏರಿ ಬೆತ್ತಲೆಯಾಗಿ ಬಿದ್ದಿದ್ದನು. **ಆದಿಕಾಂಡ 9:21** ಇದನ್ನು ಆಧಾರವಾಗಿಟ್ಟುಕೊಂಡು ಈ ದಿನಗಳಲ್ಲಿ ಎಷ್ಟೋ ಜನ ಕ್ರೈಸ್ತರೆನಿಸಿಕೊಂಡಿರುವವರು ನೋಹ ನೀತಿವಂತ ಆತನೇ ಕುಡಿದನು ಮತ್ತು ಯೇಸು ಕ್ರೀಸ್ತರು ಕಾನಾ ಊರಿನಲ್ಲಿ ನಡೆದ ಒಂದು ಮದುವೆಯಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಅವರೇ ತಯಾರು ಮಾಡಿಕೊಟ್ಟರು ಎಂದು ತಪ್ಪಾಗಿ ಅರ್ಥ ಮಾಡಿಕೊಂಡು ಕ್ರಿಸ್‌ಮಸ್, ಗುಡ್ ಫ್ರೈಡೆಯ ದಿನ ಮುಖ್ಯವಾಗಿ ಕುಡಿಯುವುದು ಉಂಟು. ಆದರೆ ಇಲ್ಲಿ ನೋಹನು ಕುಡಿದು ಅಮಲೇರಲು ಕಾರಣವೇನು? ಮತ್ತು ನೋಹನು ಏತಕ್ಕಾಗಿ ಕುಡಿದನು? ಮುಂದೆ ನೋಡೋಣ

ಜನರು ಕುಡಿಯುವುದನ್ನೇ ಹಿಡಿದರೆ ಪರಲೋಕಕ್ಕೆ ಹೋಗಲು ಹೇಗೆ ತಾನೆ ಸಾಧ್ಯ? **1ಕೊರಿಂಥ 6:10** ವಾಕ್ಯವು ಏನು ಹೇಳುತ್ತದೆ ಕುಡಿಕರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ. ನೋಹ ಕುಡಿದರು ನಾನು ಕುಡಿಯುತ್ತೇನೆಂದು ಹೇಳುವುದು ತಪ್ಪು. ನೋಹ ಕುಡಿಯಲು ಕಾರಣ, ಅವನು ಮೊದಲನೇ ಲೋಕದಲ್ಲೂ ದ್ರಾಕ್ಷಾರಸವನ್ನು ಕುಡಿಯುತ್ತಿದ್ದ ಆದರೆ ಅಮಲೇರುತ್ತಿರಲಿಲ್ಲ. ಆದರೆ 2ನೇ ಲೋಕದಲ್ಲಿ ಅಮಲೇರಿದರು ಕಾರಣ! ನೋಹ ಮೊದಲನೇ ಲೋಕದಲ್ಲೂ, 2ನೇ ಲೋಕದಲ್ಲೂ ಬದುಕಿದ್ದ ಮನುಷ್ಯ. ಮೊದಲನೇ ಲೋಕದಲ್ಲಿ 600 ವರ್ಷಗಳು 2ನೇ ಲೋಕದಲ್ಲಿ 350 ವರ್ಷಗಳು ಬದುಕಿದ್ದನು. ಆ ಕಾಲದಲ್ಲಿ ಕುಡಿದಾಗ ದ್ರಾಕ್ಷಾರಸ ಉಳಿ (ಕೆಟ್ಟು) ಹೋಗಿರಲಿಲ್ಲ ಕಾರಣವೇನೆಂದರೆ ಆ ಲೋಕದ ವಾತಾವರಣ ತುಂಬಾ ತಂಪಾಗಿತ್ತು ಯಾವ ಪದಾರ್ಥವು ಕೆಟ್ಟು ಹೋಗುತ್ತಿರಲಿಲ್ಲ. ಆದರೆ ಈಗ ಆ ನೀರಿನ ಕವಚ (Water Canopy ) ಹೊಡೆದು ಸೂರ್ಯನ ಕಿರಣ ನೇರವಾಗಿ ಬಿದ್ದು ಎಲ್ಲಾ ಆಹಾರಗಳು ಉಳಿಬರಲು ಶುರುವಾಯಿತು. ಆದ್ದರಿಂದ ಅಲ್ಲಿಂದೀಚೆಗೆ ಬ್ಯಾಕ್ಟಿರೀಯಾಗಳು ಉತ್ಪತ್ತಿಯಾಗಲು ಶುರುವಾಯಿತು ಮತ್ತು ಮೊದಲನೇ ಲೋಕದಲ್ಲಿ ನೀರಿನ ಕವಚವಿತ್ತು ಅನ್ನೋದಕ್ಕೆ 3ನೇ ಆಧಾರ, 2ನೇ ಆಧಾರ ನೀರಿನ (ಆಕಾಶದ ತೂಬುಗಳು ತೆಗೆದರು), ಮೊದಲನೇ ಆಧಾರ ಮಳೆ ಬಂದಿರಲಿಲ್ಲ.

ಈಗ ನೋಹನಿಗೆ ತಿಳಿದದ್ದೇನೆಂದರೆ ಇನ್ನೂ ಮುಂದೆ ಹೆಚ್ಚು ದಿನಗಳವರೆಗೆ ದ್ರಾಕ್ಷಾರಸವನ್ನು ಇಟ್ಟುಕೊಂಡು ಕುಡಿಯಬಾರದೆಂದು, ಮುಂದೆ ನೋಹನು ಅದೇ ರೀತಿ ಮಾಡಿರಬಹುದು. ಬೇರೆ ಯಾವ ಸ್ಥಳದಲ್ಲೂ ನೋಹನು ಕುಡಿದು ಅಮಲೇರಿದ ಎಂದು ಬರೆದಿಲ್ಲಾ..

ಈ ನೋಹನಿಗೆ 3ಜನ ಗಂಡು ಮಕ್ಕಳಿದ್ದರು ಅವರಿಗೆ ಆಶೀರ್ವದಿಸುತ್ತಾನೆ, ಈ ಮೂರು ಜನ ಗಂಡು ಮಕ್ಕಳು ಮೂರು ರೀತಿಯಾದ ಜನಾಂಗವನ್ನು ಸೂಚಿಸುತ್ತದೆ. (1)ಏಷ್ಯಾಖಂಡ (2)ಯೂರೋಪ್ (3)ಆಫ್ರಿಕಾಖಂಡ ಮುಂದೆ ನಾವು ಸತ್ಯವೇದದಲ್ಲಿ ಓದುವಾಗ **ಆದಿಕಾಂಡ 9:25** ರಲ್ಲಿ ಕಾನಾನನು(ಹಾಮ್) ಶಾಪಗ್ರಂಸ್ತನಾಗಲಿ ಎಂದು ನೋಹನು ಶಾಪ ಕೊಡುತ್ತಾರೆ, ಕಾರಣ ತನ್ನ ತಂದೆ ಬೆತ್ತಲೆಯಾಗಿ ಬಿದ್ದಿರುವುದನ್ನು ನೋಡಿ ಅವನು ತನ್ನ ಅಣ್ಣ ತಮ್ಮನಿಗೆ ತಿಳಿಸುತ್ತಾನೆ. ಈ ಕಾರಣದಿಂದ ಹಾಮನು ಶಾಪಗ್ರಸ್ತನಾದ ಮತ್ತು ಅವನ ಅಣ್ಣ ತಮ್ಮಂದಿರಿಗೆ ದಾಸಾನುದಾಸನಾಗಲಿ ಎಂದು ಹೇಳುತ್ತಾರೆ.

ಹೀಗೆ ನೋಡುವಾಗ ಈ 3 ಖಂಡಗಳಲ್ಲಿ ಇವನು ಯಾವ ಜನಾಂಗದವರನ್ನು ಸೂಚಿಸುತ್ತಾನೆ, ಸತ್ಯವೇದದ ಆಧಾರದಿಂದ ಪಾಪಮಾಡುವವರೆಲ್ಲಾ (ಲೋಕದವರೆಲ್ಲಾ) ಪಾಪಕ್ಕೆ ದಾಸರಾಗಿದ್ದಾರೆ ಈ ದಾಸರಿಗೆ ಕಾನಾನನ(ಹಾಮ್) ಸಂತತಿಯವರು ದಾಸರಾಗಿದ್ದರು. ಅಂದರೆ ತುಂಬಾ ಕೆಳಮಟ್ಟದ ಜನಾಂಗದವರು (ಕಪ್ಪು ಜನಾಂಗದವರು).

"ಶೇಮನ ದೇವರಿಗೆ ಸ್ತೋತ್ರವಾಗಲಿ, ಕಾನಾನನು ಅವರಿಗೆ ದಾಸನಾಗಿರಲಿ. ಯೆಫೇತನನ್ನು ದೇವರು ವಿಸ್ತರಿಸಲಿ ಅವನು ಶೇಮನ ಗುಡಾರದಲ್ಲಿ ವಾಸವಾಗಿರಲಿ ಇವರಿಬ್ಬರಿಗೂ ಕಾನಾನನು ದಾಸನಾಗಿರಲಿ". ಯೆಫೇತನು ಅಂದರೆ ಯೂರೋಪಿಯನ್ನರು ಇವನನ್ನು ದೇವರು ವಿಸ್ತರಿಸಲಿ ಎಂದರು, ಅಂದರೆ ಒಂದು ಕಾಲದಲ್ಲಿ ಎಲ್ಲಾ ಜನಾಂಗಗಳನ್ನು ಆಳ್ವಿಕೆ ಮಾಡುತ್ತಿದ್ದವರು ಇವರೇ, ಅಮೇರಿಕಾ, ಆಸ್ಟ್ರೇಲಿಯಾವನ್ನು ಕಂಡು ಹಿಡಿದವರು ಇವರೇ. ಇವರು ಶೇಮನ ಗುಡಾರದಲ್ಲಿ ವಾಸಮಾಡಲಿ ಅಂದರೆ ಏಷ್ಯಾ ಖಂಡದ ಜನರು. ಭಾರತ ಮತ್ತು ಏಷ್ಯಾದ ಅನೇಕ ದೇಶಗಳಲ್ಲಿ ಎಲ್ಲಾ ಕಡೆ ಆಳ್ವಿಕೆ ಮಾಡಿದರು ಇವರೇ ಬ್ರಿಟೀಷರು.

“ಶೇಮನ ದೇವರಿಗೆ ಸ್ತೋತ್ರ” ಅಂದರೆ ದೇವರನ್ನು ಉಡುಕುವವರು ಇವರೇ ಎಂದು ನೋಹನು ಮೊದಲೇ ತಿಳಿಸಿದ್ದಾರೆ. ಈ ಏಷ್ಯಾದವರೇ ಪ್ರಪಂಚದೆಲ್ಲೆಡೆ ಪೂಜಿಸುವ ದೇವರುಗಳನ್ನು ಕಂಡು ಹಿಡಿದವರೇ, ಪ್ರಪಂಚದ ಎಲ್ಲಾ ಧರ್ಮಗಳು ಹುಟ್ಟಿದ್ದು ಏಷ್ಯಾದಲ್ಲೇ.

ಹೀಗೆ ನೋಹನ ಮೂರು ಮಕ್ಕಳ ಮೂಲಕ ಲೋಕದ ಜನಾಂಗವೆಲ್ಲಾ ಉಂಟಾಯಿತು. ಆ ಕಾಲದಲ್ಲಿ ಎಲ್ಲರಿಗೂ ಒಂದೇ ಭಾಷೆ ಇತ್ತು. ಲೋಕದ ಜನಾಂಗದವರು, ನಿಮ್ರೋದನು ಸೇರಿ ದೊಡ್ಡ ಗೋಪುರ ಒಂದನ್ನು ಕಟ್ಟುತ್ತಾರೆ, ಆಕಾಶಕ್ಕೆ ಏರಿಹೋಗಲು ಇದು ದೇವರಿಗೆ ವಿರುದ್ಧವಾಗಿತ್ತು. ಅದಕ್ಕೆ ದೇವರು ಇವರು ಪ್ರಾರಂಭದಲ್ಲೇ ಇಷ್ಟು ದೊಡ್ಡ ಕೆಲಸ ಮಾಡಿದರೆ ಮುಂದೆ ಏನು ಎಂದು ದೇವರು ಇವರ ಭಾಷೆಯನ್ನು ಒಬ್ಬರಿಗೊಬ್ಬರು ತಿಳಿಯದಂತೆ ಅವರ ಭಾಷೆಯನ್ನು ತಾರುಮಾರು ಮಾಡಿದರು ಈ ಕಾರಣದಿಂದ ಬಾಬೆಲ್ ಎಂದು ಹೆಸರು ಬಂತು. ಬಾಬೆಲ್ ಎಂದರೆ (CONFUTION) ಎಂದರ್ಥ. ಹೀಗೆ ಎಲ್ಲರೂ ತಿಳಿಯದ ಭಾಷೆಯನ್ನು ಮಾತಾಡಿದಾಗ ಲೋಕದ ಎಲ್ಲೆಡೆ ಚದರಿ ಹೋದರು, ಈ ರೀತಿಯಾಗಿ 2ನೇ ಲೋದವನ್ನು ಪ್ರಾರಂಭ ಮಾಡಿದರು.

ಈ ಲೋಕದಲ್ಲಿ ತುಂಬಾ ನಂಬಿಗಸ್ತ ಮನುಷ್ಯನನ್ನು ದೇವರು ಆರಿಸಿಕೊಂಡರು, ಅವನೇ ಅಬ್ರಹಾಮ. ಆದರೆ ಅವನು ಶ್ರೀಮಂತನಾದರೂ ಅವನಿಗೆ ಮಕ್ಕಳಿರಲಿಲ್ಲ ಎಂಬ ಕೊರತೆ ಇತ್ತು. ದೇವರು ಅವನಿಗೆ ನಾನು ತೋರಿಸುವ ದೇಶಕ್ಕೆ ಬಾ ನಿನ್ನ ಸಂತತಿಗೆ ಆ ದೇಶವನ್ನು ಕೊಟ್ಟು ಅವರ ಮುಖಾಂತರ ಲೋಕದ ಎಲ್ಲಾ ಜನಾಂಗದವರನ್ನು ಆಶೀರ್ವದಿಸುವೆನು ಎಂದು ಹೇಳುತ್ತಾರೆ.

ಆಗ ಅಬ್ರಹಾವನು ದೇವರ ಮಾತಿನಂತೆ ಹೊರಡುತ್ತಾನೆ, ಆ ದಿನದಲ್ಲಿ ಅವನಿಗೆ 75 ವರ್ಷವಾಗಿತ್ತು. 100 ವರ್ಷದಲ್ಲಿ ಅವನಿಗೆ ಒಂದು ಮಗುವನ್ನು ಕೊಟ್ಟರು. ನಂತರ 25 ವರ್ಷಗಳ ವರೆಗೆ ದೇವರು ಅವನ ಸಂಗಡ ಮಾತನಾಡಿರಲಿಲ್ಲ ಆಮೇಲೆ ದೇವರು ಅವನನ್ನು ಕರೆಯುತ್ತಾರೆ ಮತ್ತು ಅವನ ಸಂಗಡ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಆದರೆ 25 ವರ್ಷಗಳ ಕಾಲ ನಮ್ಮ ಜೊತೆ ದೇವರು ಸಹಕರಿಸದಿದ್ದರೆ ನಾವು ಈ ದಾರಿಯನ್ನೇ ಬಿಟ್ಟುಬಿಡುತ್ತಿದ್ದೆವು. ಈ ಕಾರಣದಿಂದ ಅಬ್ರಹಾಮನು ನಂಬಿಕೆಗೆ ಮೂಲ ಪುರುಷನಾದನು. ಮತ್ತು ದೇವರು ಅಬ್ರಹಾನನನ್ನು ನನ್ನ ಸ್ನೇಹಿತ ಎಂದು ಕರೆದರು. ಆ ಕಾಲದಲ್ಲಿ ಸತ್ಯವೇದ ಇರಲಿಲ್ಲ ಜೊತೆಗೆ ದೇವರ ವಿಷಯ ಮಾತಾಡಲು ಮತ್ತು ಹಂಚಿಕೊಳ್ಳಲು ಯಾರೂ ಇರಲಿಲ್ಲ ಹೇಗೆ 25 ವರ್ಷ ತಾಳ್ಮೆಯಿಂದ ನಂಬಿಕೆಯಿಂದ ಕಾದನು ಎಂಬುದನ್ನು ಇಲ್ಲಿ ಯೋಚಿಸಬೇಕು. ಅದಕ್ಕೆ 100 ವಯಸ್ಸಿನಲ್ಲಿಯೂ ಸಾರಯಳಿಗೆ ಒಬ್ಬ ಮಗ ಹುಟ್ಟುತ್ತಾನೆ ಎಂಬ ವಾಗ್ದಾನ ಮಾಡುತ್ತಾರೆ. ಆದರೆ ಸಾರಳು ಇದನ್ನು ಕೇಳಿ ನನ್ನಂತ ಮುದುಕಿಗೆ ಭೋಗವಾದೀತೇ? ನನ್ನ ಯಜಮಾನ ಮುದುಕನಲ್ಲವೆ ಎಂದು ತನ್ನೊಳಗೆ ನಕ್ಕಳು **ಆದಿಕಾಂಡ 18:12.** ಸಾರಳು ಆ ಮಾತನ್ನು ಕೇಳಿ ನಕ್ಕಳು, ಆದರೆ ಅಬ್ರಹಾಮನು ನಕ್ಕನಾ? **ಆದಿಕಾಂಡ 17:16** ಅಬ್ರಹಾಮನು ಸಹ ಅಡ್ಡ ಬಿದ್ದು ನಕ್ಕನು.

ಇಸಾಕನು ಹುಟ್ಟಿದ ಮೇಲೆ ದೇವರು ಇಸಾಕನನ್ನು ತನಗಾಗಿ ದಹನಬಲಿಯಾಗಿ ಅರ್ಪಿಸಬೇಕೆಂದು ಅಬ್ರಹಾಮನನ್ನು ಕೇಳುತ್ತಾರೆ, ಆಗ ಅಬ್ರಹಾಮನು ತನ್ನ ಮಗನನ್ನು ದೇವರಿಗೆ ದಹನಬಲಿಯಾಗಿ ಅರ್ಪಿಸಲು ಬೆಟ್ಟಕ್ಕೆ ಕರೆದುಕೊಂಡು ಹೋಗುತ್ತಾನೆ. ಬೆಟ್ಟಕ್ಕೆ ಪಯಣ ಮಾಡಲು 3 ದಿನಗಳು ಎಂದು ಸತ್ಯವೇದದಲ್ಲಿ ಬರೆಯಲ್ಪಟ್ಟಿದೆ. ಈ 3 ದಿನ ತನ್ನ ಮನಸ್ಸಿನಲ್ಲಿ ಹೇಗೆ ಸಹಿಸಿ ಕೊಂಡಿರಬೇಕು, ಬೆಟ್ಟದ ಮೇಲೆ ಅಬ್ರಹಾಮನು ತನ್ನ ಮಗನನ್ನು ಕಡಿಯಲು ಮುಂದಾದಾಗ ದೇವರು ತನ್ನ ದೂತನನ್ನು ಕಳುಹಿಸಿ ತಡೆದು “ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವುದಕ್ಕೆ ಹಿಂದೆಗೆಯದೆ ಹೋದದ್ದರಿಂದ ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು, ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು ಎಂದು ಅದನ್ನು ಆಕಾಶದ ನಕ್ಷತ್ರಗಳಷ್ಟು, ಸಮುದ್ರ ತೀರದಲ್ಲಿನ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು. ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವುದು ಎಂಬದಾಗಿ ತನ್ನಾಣೆಯಿಟ್ಟು ಹೇಳಿದ್ದಾನೆ” **ಆದಿಕಾಂಡ 22:16–18.**

ಅಬ್ರಹಾಮನಿಗೆ ಈರೀತಿಯಾದ 2 ರೀತಿಯ ಆಶೀರ್ವಾದ ಏಕೆ?
ಆಕಾಶದ ನಕ್ಷತ್ರಗಳಂತೆಯೂ, ಸಮುದ್ರ ತೀರದಲ್ಲಿನ ಉಸುಬಿನಂತೆಯೂ ಎಂದು ಯಾಕೆ ಹೇಳಿದರು. ಸಮದ್ರ ತೀರದಲ್ಲಿನ ಉಸುಬು ಅಂದರೆ ಮರಳು, ಮರಳನ್ನು ಎಣಿಸಲು ಆಗುವುದಿಲ್ಲ ಮತ್ತು ಆಕಾಶದಲ್ಲಿರುವ ನಕ್ಷತ್ರಗಳನ್ನು ಸಹ ಎಣಿಸಲು ಸಾಧ್ಯವಿಲ್ಲ. ಆದುದರಿಂದ ಇದರಲ್ಲಿ ಇಡೀ ಸತ್ಯವೇದದಲ್ಲಿರುವ ರಹಸ್ಯವನ್ನು ಅಡಗಿಸಿಟ್ಟಿದ್ದಾರೆ. ಇದನ್ನು ದೇವರೇ ತನ್ನಾಣೆ ಇಟ್ಟು ಹೇಳಿದ್ದಾರೆ ಅಷ್ಟು ಕಂಡಿತ ಏಕೆಂದರೆ ಈ ವಾಗ್ದಾನ ತಪ್ಪುವುದಿಲ್ಲ, ಕಾರಣ ದೇವರು ಮಾತಿಗೆ ತಪ್ಪುವುದಿಲ್ಲ. 1) ದೇವರು ಸುಳ್ಳಾಡುವುದಿಲ್ಲ.
2) ದೇವರು ವಾಗ್ದಾನ(ವರ)ಕೊಟ್ಟ ಮೇಲೆ ಹಿಂದೆಗೆದುಕೊಳ್ಳುವುದಿಲ್ಲ, ಆದ್ದರಿಂದ 100% ಗ್ಯಾರಂಟಿ.

ನೋಡುವಾಗ ಆ ನಕ್ಷತ್ರವೆಂದರೆ : 1)ಪರಲೋಕದ ರಕ್ಷಣೆ 2)ಭೂಲೋಕದ ರಕ್ಷಣೆ ಈ ಎರಡು ವಿಧವಾದ ರಕ್ಷಣೆಯನ್ನು ದೇವರು ನಮಗೆ ಕೊಟ್ಟಿದ್ದಾರೆ. ಪರಲೋಕದ ರಕ್ಷಣೆಗೆ ಯಾರು ಹೋಗುತ್ತಾರೆ ಎಂದರೆ ಯೇಸು ಕ್ರಿಸ್ತರು ಬಂದಂದಿನಿಂದ ಆರಿಸಿರುವ ಗುಂಪು ಪರಲೋಕದ ರಕ್ಷಣೆಗೆ ಹೋಗುತ್ತಾರೆ. ಯೇಸು ಕ್ರೀಸ್ತರು ಬರುವುದಕ್ಕಿಂತ ಮೊದಲು ಇದ್ದವರೆಲ್ಲಾ ಭೂಲೋಕದ ರಕ್ಷಣೆಗೆ ಬರುತ್ತಾರೆ ಏಕೆಂದರೆ ಇವರಿಗೆ ಪರಲೋಕದ ರಕ್ಷಣೆಗೆಂದು ಇವರಿಗೆ ವಾಗ್ದಾನ ಮಾಡಿಲ್ಲಾ, ಯೇಸು ಕ್ರಿಸ್ತರು ಭೂಲೋಕಕ್ಕೆ ಬಂದ ಮೇಲೆ ಪರಲೋಕದ ರಕ್ಷಣೆಗೆ ಮಾರ್ಗವಾಯಿತು.

ಆದಾಮನಿಂದ ಯೇಸು ಕ್ರೀಸ್ತನು ಬರುವ ತನಕ ಇರುವ ಹೆಚ್ಚು ನಂಬಿಗಸ್ಥ ದೊಡ್ಡ ವ್ಯಕ್ತಿ ಯಾರು ?

**ಮತ್ತಾಯ** 11:11 "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ", ಸ್ನಾನಿಕನಾದ ಯೋಹಾನನೇ ದೊಡ್ಡವನು" ಇವರಿಗಿಂತ ದೊಡ್ಡವರು ಯಾರೂ ಇಲ್ಲಾ ಆದರೂ ಪರಲೋಕ ರಾಜ್ಯದಲ್ಲಿರುವ ಚಿಕ್ಕವನು ಇವನಿಗಿಂತ ದೊಡ್ಡವನಾಗಿರುವನು ಅಂದರೆ ಯೇಸು ಕ್ರೀಸ್ತನೇ. ಇದರ ಅರ್ಥವೇನೆಂದರೆ ಭೂಲೋಕದಲ್ಲಿ ಎಷ್ಟೇ ದೊಡ್ಡವನಾಗಿದ್ದರೂ ಪರಲೋಕಕ್ಕ ಹೋಗಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಚಿಕ್ಕವನಾಗಿರುವದರಿಂದ ಆ ರಾಜ್ಯದಲ್ಲಿ ದೊಡ್ಡವನಾಗಿರುತ್ತಾನೆ. ಆದುದರಿಂದ 2 ಗುಂಪನ್ನು ಸೂಚಿಸಿದ್ದಾರೆ. ಸ್ನಾನಿಕನಾದ ಯೋಹಾನನು ಯೇಸುವಿನ ವಿಷಯವಾಗಿ "ಆತನ ಕೆರದ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ ಎಂದನು" ಈ ಕಾರಣದಿಂದ ಸ್ನಾನಿಕನಾದ ಯೋಹಾನನಿಗೂ ಪರಲೋಕ ಕೊಡುತ್ತೇನೆ ಎಂಬ ವಾಗ್ದಾನ ಮಾಡಲಿಲ್ಲ. ಹಾಗಾದರೆ ಅನೋಕನಿಂದ ಸ್ನಾನಿಕನಾದ ಯೋಹಾನನು ತನಕ ಇದ್ದ ದೇವ ಭಕ್ತರೆಲ್ಲಾ ಎಲ್ಲಿಗೆ ಹೋಗಿದ್ದಾರೆ, ಪರಲೋಕಕ್ಕೆ ಹೋಗಿದ್ದಾರಾ? ಈ ಮಾತನ್ನು ಯೇಸುಕೀಸ್ತರ ಬಳಿಯಲ್ಲೇ ಕೇಳಬೇಕು.

**ಯೋಹಾನ** 3:13 "ಪರಲೋಕದಿಂದ ಇಳಿದು ಬಂದವನೇ, ಅಂದರೆ ಮನುಷ್ಯ ಕುಮಾರನೇ ಹೊರತು ಮತ್ತಾರು ಪರಲೋಕಕ್ಕೆ ಏರಿ ಹೋದವರಿಲ್ಲ" ಹಾಗಾದರೆ ಪ್ರವಾದಿಗಳು ಎಲ್ಲಿಗೆ ಹೋಗಿದ್ದಾರೆ? ಏಸು ಕ್ರೀಸ್ತರು ಸುಳ್ಳನ್ನು ಹೇಳುವುದಿಲ್ಲವಲ್ಲಾ, ಹಾಗಾದರೆ ದಾವೀದನು ಎಲ್ಲಿ ಹೋದರು. **ಅಪೋಸ್ತಲರ ಕೃತ್ಯಗಳು** 2:34 "ದಾವೀದನು ಆಕಾಶಕ್ಕೆ ಏರಿ ಹೋಗಲಿಲ್ಲವಲ್ಲಾ" ಎಂದು ವಾಕ್ಯ ಹೇಳುತ್ತದೆ, ಆದರೆ ಕೆಲವರು ಯೇಸು ಕ್ರೀಸ್ತನು ಎದ್ದು ಪರಲೋಕಕ್ಕೆ ಕರೆದುಕೊಂಡು ಹೋದರು ಎಂದು ಹೇಳುತ್ತಾರೆ.

ಅಪೋಸ್ತಲರೆಲ್ಲರು ಪರಲೋಕಕ್ಕೆ ಯಾವಾಗ ಹೋದರು? ಅಪೋಸ್ತಲರೆಲ್ಲರು ಕ್ರೀಸ್ತನ 2ನೇ ಬರುವಿಕೆಯ ತನಕ ಯಾರೂ ಎದ್ದು ಬರುವುದಿಲ್ಲವೆಂದು ಅಪೋಸ್ತಲನಾದ ಪೌಲರು ಹೇಳುವುದು ಹೇಗೆ? 1**ಥೆಸಲೋನಿಕ** 4:16 "ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ಆಕಾಶದಿಂದ ಇಳಿದು ಬರುವನು" (ಅಂದರೆ 2ನೇ ಬರುವಿಕೆಯಲ್ಲಿ) ಎಂದು "ಆಗ ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದು ಬರುವರು" ಅಲ್ಲಿಯವರೆಗೂ ಯಾರೂ ಎದ್ದು ಬರುವುದಿಲ್ಲ ಎಂದು ಸತ್ಯವೇದ ಬೋಧಿಸುತ್ತದೆ. ಹೀಗೆ ನೋಡುವಾಗ ಸಭೆಗೆ ಮೊದಲು ಪುನರುತ್ಥಾನ ಅಲ್ಲಿಯವರೆಗೂ ಯಾರೂ ಎದ್ದು ಬರುವುದಿಲ್ಲ ಎಂದು ಸತ್ಯವೇದ ಬೋಧಿಸುತ್ತದೆ. ಹಾಗಾದರೆ ಎಲೀಯ ಪ್ರವಾದಿ ಪರಲೋಕಕ್ಕೆ ಹೋದರು ಅಂತ ಇದೆಯಲ್ಲಾ ! ಎಲ್ಲಿದ್ದರು?

2**ಅರಸುಗಳು** 2:11 "ಅವರು ಮಾತಾಡುತ್ತಿರುವಾಗ ಪಕ್ಕನೆ ಅಗ್ನಿಮಯವಾದ ರಥರಥಾಶ್ವಗಳು ನಡುವೆ ಬಂದು ಅವರನ್ನು ವಿಂಗಡಿಸಿದವು, ಎಲೀಯನು ಸುಳಿಗಾಳಿಯ ಮುಖಾಂತರವಾಗಿ ಆಕಾಶಕ್ಕೆ ಏರಿಹೋದನು".

ಹಾಗಾದರೆ ಯೇಸು ಕ್ರೀಸ್ತರು ಸುಳ್ಳು ಹೇಳುತ್ತಾರಾ ? ಇಲ್ಲಾ ಎಂದಿಗೂ ಇಲ್ಲಾ ! ಇದರ ಅರ್ಥವನ್ನು ಸತ್ಯವೇದದಲ್ಲಿ ಸರಿಯಾಗಿ ಪರೀಕ್ಷಿಸಬೇಕು. ತೆಲುಗು 'ಬೈಬಲ್ ನಲ್ಲಿ' ಆಕಾಶಕ್ಕೆ ಎಂದು ಬರೆದಿದೆ, ಅಂದರೆ ಎಲೀಯನನ್ನು ಆಗಾಗ್ಗೆ ಆಕಾಶಕ್ಕೆ ಪರಿತ್ರಾತ್ಮ ಎತ್ತಿಕೊಂಡು ಹೋಗುತ್ತಿತ್ತು. ಇದು ಆಕಾಲದಲ್ಲಿ ನಡೆಯುತ್ತಿದ್ದ ಸಾಮಾನ್ಯ ಘಟನೆ, ಅಂದರೆ ಪರಲೋಕ ಅಲ್ಲ. ಇಂಗ್ಲೀಷ್ ಬೈಬಲ್ ನಲ್ಲೂ **heven** ಅಂದರೆ ಆಕಾಶವೆಂದೇ ಇದೆ. 16ನೇ ವಚನದಲ್ಲಿ ಕೆಲವರು ಪ್ರವಾದಿಗಳು ಬಂದು ಎಲೀಷನನ್ನು ನಿನ್ನ ಸೇವಕರಾದ ನಮ್ಮಲ್ಲಿ 50 ಮಂದಿ ಇದ್ದಾರೆ ನಿನ್ನ ಯಜಮಾನನನ್ನು ಹುಡುಕುವುದಕ್ಕೆ ಅಪ್ಪಣೆಕೊಡು ಎಂದು ಕೇಳುತ್ತಾರೆ. ಏಕೆಂದರೆ ಎಲೀಯನನ್ನು ದೇವರ ಆತ್ಮ ಆಗಾಗ್ಗೆ ಈ ರೀತಿ ಎತ್ತಿಕೊಂಡು ಹೋಗುತ್ತಿತ್ತು ಈ ಬಾರಿಯೂ ಹಾಗೆಯೇ ಎತ್ತಿಕೊಂಡು ಹೋಗಿ ಬೆಟ್ಟದ ಮೇಲೆಯೋ ಅಥವಾ ಒಂದು ತಗ್ಗಿನಲ್ಲಿ ಇಟ್ಟಿರಬಹುದು ಎಂದು ಹೇಳುತ್ತಾರೆ.

1**ಅರಸು** 18:12 ''ನಾನು ನಿನ್ನನ್ನು ಬಿಟ್ಟು ಹೊರಟ ಕೂಡಲೆ ಯೆಹೋವನ ಆತ್ಮವು ನಿನ್ನನ್ನು ನನಗೆ ಗೊತ್ತಿಲ್ಲದ ಬೇರೊಂದು ಸ್ಥಳಕ್ಕೆ ಒಯ್ಯುವುದು". ಅಂದರೆ ಓಬದ್ಯ ಎಲೀಯನಿಗೆ ನಾನು ಹೋದ ಮೇಲೆ ನೀನು ಕಣ್ಣಿಗೆ ಕಾಣಿಸದಂತೆ ಹೋದರೆ ನಾನೇನು ಮಾಡಲಿ ಎಂದು ಹೇಳುತ್ತಾರೆ. ಇದೇ ರೀತಿ ಅಲ್ಲಿ ದೇವರ ಆತ್ಮವು ಎಲೀಯನನ್ನು ಎತ್ತಿಕೊಂಡು ಹೋಯಿತು. ಇವನನ್ನು ಎತ್ತಿಕೊಂಡು ಹೋದ ಮೇಲೆ 10 ವರ್ಷಗಳಾದ ಮೇಲೆ ಒಂದು ಪತ್ರ ಬರೆಯುತ್ತಾರೆ.

**2ಪೂರ್ವಕಾಲ ವೃತ್ತಾಂತ 21:12** ಹೀಗಿರಲು ಪ್ರವಾದಿಯಾದ ಎಲೀಯನು ಕಾಗದದ ಮೂಲಕವಾಗಿ ಅವನಿಗೆ ನಿನ್ನ ಪೂರ್ವಿಕನಾದ ದಾವೀದನ ದೇವರಾಗಿರುವ ಯೆಹೋವನ ಮಾತನ್ನು ಕೇಳು ಎಂದು ಆಗಾಗ ಪತ್ರ ಬರೆಯುತ್ತಿದ್ದರು, ಎಂದು ಸಾಕ್ಷಿ ಇದೆ. ಹಾಗಾದರೆ ಎಲೀಯನು ಪರಲೋಕಕ್ಕೆ ಹೋಗಲಿಲ್ಲಾ ಎಲ್ಲೋ ಒಂದು ಕಡೆಯಿದ್ದು ಪತ್ರಗಳ ಮೂಲಕವೇ ರಾಜರುಗಳನ್ನು ಎಚ್ಚರಿಸುತ್ತಿದ್ದರು. ಇದೇ ರೀತಿ ಹನೋಕನು ಸಹ ಪರಲೋಕಕ್ಕೆ ಹೋಗಲಿಲ್ಲ.

**ಇಬ್ರಿಯರಿಗೆ 11:5** ಇದಲ್ಲದೆ ಹನೋಕನು ಮರಣವನ್ನು ಅನುಭವಿಸದೆ ಪರಲೋಕಕ್ಕೆ ಒಯ್ಯಲ್ಪಟ್ಟಿದ್ದು ನಂಬಿಕೆಯಿಂದಲೇ. 13ನೇ ವಾಕ್ಯದಲ್ಲಿ ಇವರೆಲ್ಲರೂ ವಾಗ್ದಾನದ ಫಲವನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದಿಂದ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು. ಅಂದರೆ 11ನೇ ಅಧ್ಯಾಯದಲ್ಲಿ ಬರೆದಿರುವ ನಂಬಿಗಸ್ತರೆಲ್ಲರು ಹನೋಕನು ಸೇರಿ ಸತ್ತುಹೋದರು ಎಂದು ಸ್ಪಷ್ಟವಾಗಿ ಬರೆದಿದೆ.

ಆದಿಕಾಂಡದಲ್ಲಿ ಓದುವಾಗ ಹನೋಕನು ದೇವರ ಜೊತೆ ಅನ್ಯೋನ್ಯವಾಗಿದದ್ದರಿಂದ ದೇವರು ಅವನನ್ನು ಎತ್ತಿಕೊಂಡು ಹೋದರು ಎಂದು ಬರೆದಿದೆ. ಅಂದರೆ ಹನೋಕನನ್ನು ದೇವರು ಪರಲೋಕಕ್ಕೆ ಕರೆದುಕೊಂಡು ಹೋದರು ಎಂದು ಅರ್ಥವಲ್ಲಾ ?
**ಉದಾ:–** ಒಬ್ಬ ವ್ಯಕ್ತಿ ಒಳ್ಳೆಯ ದಾನ, ಧರ್ಮಮಾಡಿ ಚಿಕ್ಕ ವಯಸ್ಸಿನಲ್ಲೇ ಸತ್ತರೆ, ನಾವು ಸಾಮಾನ್ಯವಾಗಿ ಅಯ್ಯೋ ದೇವರು ಚಿಕ್ಕ ವಯಸ್ಸಿನಲ್ಲೇ ಕರೆದುಕೊಂಡು ಬಿಟ್ಟರು ಎಂದು ಹೇಳುತ್ತೇವೆ. ಹಾಗಾದರೆ ಅವನನ್ನು ನಿಜವಾಗಿ ಪರಲೋಕಕ್ಕೆ ಕರೆದುಕೊಂಡು ಹೋದರಾ ? ಕಂಡಿತವಾಗಿಯೂ ಇಲ್ಲಾ. ಅದೇ ರೀತಿ ಇಲ್ಲೂ ಸಹ ಮಾಡನಾಡಿದ್ದಾರೆ.

**ಇಬ್ರಿಯರಿಗೆ 11:5** ಹನೋಕನು ಮರಣವನ್ನು ಅನುಭವಿಸದೇ ಒಯ್ಯಸ್ಪಟ್ಟದ್ದು ನಂಬಿಕೆಯಿಂದಲೇ, ಅಂದರೆ ಮರಣವನ್ನು ಅನುಭವಿಸಲಿಲ್ಲ ಎನ್ನುತ್ತಾರೆ. ಅಂದರೆ 'ಸತ್ತರು' 'ಮರಣಕ್ಕೂ' 'ಸಾಯುವುದಕ್ಕೂ' ವ್ಯತ್ಯಾಸವಿದೆ. ಹುಟ್ಟಿದಾಗಿನಿಂದ ಸಾಯುವವರೆಗೂ ನರಳಿ ಕಷ್ಟ, ಸುಖ, ದುಃಖ, ನೋವು ದಿನೇದಿನೇ ಅನುಭವಿಸಿ ಕೊನೆಗೆ ಒಂದು ದಿನ ಸಾಯುವುದಕ್ಕೆ ಸತ್ಯವೇದದಲ್ಲಿ ಇದನ್ನೇ ಮರಣ ಎಂದು ಕರೆಯುತ್ತಾರೆ. ಇದನ್ನು ಹನೋಕನು ಅನುಭವಿಸಲಿಲ್ಲ ಏಕೆಂದರೆ ದೇವರಿಗೆ ಯೋಗ್ಯನಾದ ಮನುಷ್ಯ ಆದಾಮನಿಗೆ 7ನೇಯ ಮನುಷ್ಯ. 7 ಅಂದರೆ ಪರಿಪೂರ್ಣತೆಗೆ ಹೋಲಿಕೆಯಾಗಿದೆ. 360ದಿನ ಎಂದರೆ ಒಂದು ವರ್ಷ.

ಹೀಗಿರುವುದರಿಂದ ಅವರೆಲ್ಲ ಎಲ್ಲಿದ್ದಾರೆ ? **ಯೋಹಾನ 5:28**
"ಇದಕ್ಕೆ ಆಶ್ಚರ್ಯ ಪಡಬೇಡಿರಿ, ಸಮಾದಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ.".
ಅಂದರೆ ಸಮಾಧಿಯಲ್ಲಿರುವವರೆಲ್ಲರು ನಿದ್ರಿಸುತಿದ್ದಾರೆ, ಅದಕ್ಕಾಗಿಯೇ ಸಮಾಧಿಗಳ ಮೇಲೆ REP ಎಂದು ಬರೆದಿರುವುದನ್ನು ಕಾಣುತ್ತೇವೆ. ಅಂದರೆ REST IN PEACE ಎಂದರೆ 'ವಿಶ್ರಾಂತಿ ಹೊಂದು ಎಂದರ್ಥ' ಆದಕಾರಣ ದೇವರು ಎಲ್ಲರಿಗೂ ಹಾಸಿಗೆ ಹಾಕಿದ್ದಾರೆ.

**ಯೆಶಾಯ 57:1,2** " ಸಜ್ಜನರು ನಾಶವಾಗುತ್ತಾರೆ, ಯಾರೂ ಮನಸ್ಸಿಗೆ ತಾರರು, ಸದ್ಭಕ್ತರು ಗತಿಸುತ್ತಾರೆ ಆಹಾ ಯೋಚಿಸರು, ಆಹಾ ಶಿಷ್ಟರು ಕೇಡಿನಿಂದ ಪಾರಾಗಿದ್ದಾರೆ ಎಂದು ಯಾರೂ ಯೋಚಿಸರು. ಇವರು ಸಮಾಧಾನದಲ್ಲಿ ಸೇರಿದ್ದಾರಲ್ಲಾ. ನೆಟ್ಟಗೆ ನಡೆಯುವ ಪ್ರತಿಯೊಬ್ಬನು ತನ್ನ ತನ್ನ ದೀರ್ಘಾ ನಿದ್ರಾಸ್ಥಾನದಲ್ಲಿ ವಿಶ್ರಮಿಸಿ ಕೊಳ್ಳುತ್ತಿದ್ದಾನೆ. ಇಲ್ಲಿ ನೆಟ್ಟಗೆ ನಡೆಯುವ ಅಂದರೆ ನಂಬಿಗಸ್ತರು, ಭಕ್ತರು, ಪ್ರವಾದಿಗಳು ಎಲ್ಲರೂ ತನ್ನ ತನ್ನ ಹಾಸಿಗೆಯಲ್ಲಿ ವಿಶ್ರಾಂತಿ ಹೊಂದುತ್ತಾ ಇದ್ದಾರೆ. ಇಂಥಹವರಿಗೆಲ್ಲಾ ದೇವರು ತಕ್ಕ ಬಹುಮಾನವನ್ನು ಕೊನೆಗೆ ಕೊಟ್ಟೇ ಕೊಡುತ್ತಾರೆ. ಅದು ಏನೆಂದರೆ ಶ್ರೇಷ್ಠ ಪುನರುತ್ಥಾನ ಆ ಸಮಯದವರೆಗೂ ವಿಶ್ರಾಂತಿ.

**ಇಬ್ರಿಯ 11:3** "ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೆ ಹೆಸರನ್ನು ಸಂಪಾದಿಸಿಕೊಂಡಿದ್ದರು ವಾಗ್ದಾನದ ಫಲವನ್ನು ಹೊಂದಲಿಲ್ಲ. ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದು ಎಂದು ಸಂಕಲ್ಪಿಸಿದನು'.

ಅಂದರೆ ಅಬ್ರಹಾಮ, ಇಸಾಕ, ಅನೋಕ್, ಎಲ್ಲಾ ಭಕ್ತರು ನಂಬಿಕೆಯ ಮೂಲಕ ಒಳ್ಳೆಯ ಹೆಸರು ಸಂಪಾದಿಸಿಕೊಂಡರು. ಆದರೆ ಆ ವಾಗ್ದಾನದ ಫಲ ಹೊಂದಲಿಲ್ಲ ಹಾಗಾದರೆ ಈಗ ನಾವಿಲ್ಲದೆ ಅಂದರೆ ಸಭೆಗೆ ವಿಶೇಷ ಭಾಗ್ಯ. ಅಂದರೆ ಪರಲೋಕದ ರಕ್ಷಣೆಕೊಟ್ಟು ನಮ್ಮ ಮೂಲಕ ಅವರಿಗೆ ಶ್ರೇಷ್ಠ ಪುನರುತ್ಥಾನವನ್ನು ಕೊಟ್ಟು ಅವರನ್ನು ಸಿದ್ಧಿಗೆ ತರುವರು.

ಮೋಶೆ ಮುವತ್ತು ಲಕ್ಷ ಜನರನ್ನು ಐಗುಪ್ತದಿಂದ ಕರೆದು ಕಾನನಿನೆಡೆಗೆ ನಡೆಸಬೇಕಾದರೆ ಎಂತಹ ತಾಳ್ಮೆ, ಜ್ಞಾನ ಬೇಕು. ದಾವೀದ, ಸಿಂಸೋನ್, ಗಿದ್ಯೋನ್ ಇವರನ್ನು ನೋಡಿದರೆ ನಮಗಿಂತ ವಿಶ್ವಾಸ ವೀರರು ಅಂದರೆ ಅವರಿಗಿಂತ ಶ್ರೇಷ್ಠವಾದ ಭಾಗ್ಯ ನಮಗೆ ದೇವರು ಕೊಡುತ್ತೇನೆಂದು ಹೇಳಬೇಕಾದರೆ ನಾವು ಹೇಗೆ ದೇವರಿಗೆ ಕೃತಜ್ಞತೆಯುಳ್ಳವರಾಗಿರಬೇಕು ಯೋಚಿಸಿರಿ. ಪರಲೋಕದ ರಕ್ಷಣೆ ನಮಗೆ, ಭೂಲೋಕದ ರಕ್ಷಣೆ ಅವರಿಗೆ.

ಹಾಗಾದರೆ ಪರಲೋಕಕ್ಕೆ ಹೋಗಬೇಕಾದರೆ ಕೆಲವು ನಿಯಮಗಳಿವೆ.
**ಲೂಕ 14:26,27** "ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ, ಹೆಂಡತಿ, ಅಣ್ಣ, ತಮ್ಮ, ತಂಗಿ ತನ್ನ ಪ್ರಾಣವನ್ನು ಸಹ ಹಗೆ ಮಾಡದಿದ್ದರೆ ಅವನು ನನಗೆ ಶಿಷ್ಯನಾಗಿರಲಾರನು." ಶಿಷ್ಯನಾಗಬೇಕಾದರೆ ಈ ನಿಯಮವಿದ್ದರೆ ಮಾತ್ರ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಲು ದೇವರು ಅನುಮತಿಸುತ್ತಾರೆ. ಪರಲೋಕಕ್ಕೆ ಹೋಗಬೇಕಾದರೆ ಸುಮ್ಮನೇನು ಅಲ್ಲ
**ಅಪೋಸ್ತಲರ ಕೃತ್ಯ 4:22** " ನಾವು ಬಹು ಸಂಕಟಗಳನ್ನು ತಾಳಿದರೆ ನಮಗೆ ದೇವರ ರಾಜ್ಯ (ಪರಲೋಕ)" ಇವೆರಡು ಇದ್ದರೆ ಪರಲೋಕಕ್ಕೆ ಹೋಗಲು ಸಾಧ್ಯ., ಕ್ರಿಸ್ತನಿಗಾಗಿ ಎಲ್ಲವನ್ನು ತ್ಯಾಗಮಾಡಿ ಹೋಗಬೇಕು.
**ಇಬ್ರಿಯರಿಗೆ 10:20** "ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸಲು ನಮಗೆ ಧೈರ್ಯ ಉಂಟಾಯಿತು. ಅಂದರೆ ಇದು ಪರಲೋಕಕ್ಕೆ ಪ್ರವೇಶಿಸಲು ಮಾರ್ಗ ಸಿದ್ದವಾಯಿತು ದೇವಾಲಯದ ತೆರೆ ಹರಿದುಹೋಯಿತು ಮತ್ತು ಕ್ರಿಸ್ತನ ಶರೀರವೆಂಬ ತೆರೆಯ ಮೂಲಕ ಪ್ರವೇಶ ಸಿಕ್ಕಿತು. **ಇಬ್ರಿಯರಿಗೆ 2:3** " ಈ ಅತ್ಯಂತ ವಿಶೇಷ ರಕ್ಷಣೆಯನ್ನು ಅಲಕ್ಷ ಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ"
**ಇಬ್ರಿಯರಿಗೆ 3:1** " ಆದ್ದರಿಂದ ಸಹೋದರರೆ ಪರಲೋಕ ಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪವರೆ" ಅಂದರೆ ಈ ಪರಲೋಕದ ರಕ್ಷಣೆಯನ್ನು ಯೇಸು ಕ್ರಿಸ್ತನು ನಮಗಾಗಿ ತೆರೆದಿದ್ದಾರೆ, ಅವರೇ ಮೊದಲು ಆರಂಭಿಸಿದವರು. ಪರಲೋಕದ ಸುವಾರ್ತೆಯನ್ನು ಸಾರಲು ಶುರು ಮಾಡಿದರು.

ಈ ರೀತಿಯಾದ ಎರಡು ಗುಂಪಿನ ಜನಾಂಗವನ್ನು ಆರಿಸಿಕೊಳ್ಳುತ್ತಿದ್ದಾರೆ. ಏಕೆಂದೆರೆ 2ನೇ ಲೋಕದಲ್ಲಿ ಮುಖ್ಯವಾಗಿ 2ನೇ ಬರುವಿಕೆಯಲ್ಲಿ ಆರಿಸುತ್ತಿದ್ದಾರೆ. **ಪ್ರಕಟಣೆ 20:4** " ತರುವಾಯ ಸಿಂಹಾಸನಗಳನ್ನು ಕಂಡೆನು ____________ ಅವರು ಜೀವಿತರಾಗಿ ಎದ್ದು ಕ್ರಿಸ್ತನೊಂದಿಗೆ 1000 ವರ್ಷ ಆಳುವರು. ಅಂದರೆ ಪುನರುತ್ಥಾನ ಹೊಂದಿ ಕ್ರಿಸ್ತನ ಜೊತೆಗೆ 1000 ವರ್ಷ ಆಳುತ್ತಾರೆ. ಇವರ ಜೊತೆ ಯಾರು ಆಳ್ವಿಕೆ ಮಾಡುತ್ತಾರೆ"? **ಪ್ರಕಟಣೆ 20:6** " ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನು, ಪರಿಶುದ್ಧನು ಆಗಿದ್ದಾನೆ. **1ಥೆಸಲೋನಿಕ 4:16** ರಲ್ಲಿ ಬರೆದಿರುವಂತೆ ಕ್ರಿಸ್ತನಲ್ಲಿದ್ದ ಸತ್ತವರು ಸಮಾಧಿಯಿಂದ ಎದ್ದು ಕ್ರಿಸ್ತನೊಂದಿಗೆ 1000 ವರ್ಷ ಆಳ್ವಕೆ ಮಾಡುತ್ತಾರೆ ಇದೇ ಪ್ರಥಮ ಪುನರುತ್ಥಾನ"" ಇಲ್ಲಿ ಆಳ್ವಿಕೆ ಮಾಡುವಾಗ ಕ್ರಿಸ್ತನೊಂದಿಗೆ ಸಭೆ ಕಣ್ಣಿಗೆ ಕಾಣುವುದಿಲ್ಲ ಇವರು ವಾಯುಮಂಡಲದಲ್ಲಿ ಆಳ್ವಿಕೆ ಮಾಡುತ್ತಾರೆ. ಈಗ ಸೈತಾನನು ಅಲ್ಲಿ ಆಳ್ವಿಕೆ ಮಾಡುತ್ತಾ ಇದ್ದಾನೆ ಅದು ಕಣ್ಣಿಗೆ ಕಾಣವುದಿಲ್ಲ, ಆದರೆ ಲೋಕದಲ್ಲಿ ಅಕ್ಕ ಪಕ್ಕ ನಡೆಯುತ್ತಿರುವ ಕಾರ್ಯಗಳನ್ನು ನೋಡಿ ತಿಳಿದುಕೊಳ್ಳಬಹುದು.

ಆಗ ಭೂಲೋಕದಲ್ಲಿ ಅವರಿಗೆ ಬದಲಾಗಿ ಯಾರಿರಬೇಕು?
ಈಗ ಸೈತಾನನಿಗೆ ಬದಲಾಗಿ ಭೂಲೋಕದಲ್ಲಿ ರಾಜರುಗಳು, ಅಧಿಕಾರಿಗಳು, ಸಂಘಸಂಸ್ಥೆಗಳು ಇವೆ ಇವರುಗಳ ಮೂಲಕ ಆಳ್ವಿಕೆ ಮಾಡುತ್ತಿದ್ದಾನೆ. ಹಿಂದೆ ಮೊಸಲನೇ ಲೋಕದಲ್ಲಿ ಮಾಂಸಿಕ ಶರೀರದಲ್ಲಿ ಬಂದು ಆಳ್ವಿಕೆ ಮಾಡುತ್ತಿದ್ದ ಆ ಒಂದು ಯೋಜನೆಯನ್ನು ನಾಶ ಮಾಡಿದರು. ಈಗ ಆತ್ಮಗಳ ಮೂಲಕ ಬಂದು ಆಳ್ವಿಕೆ ಮಾಡುತ್ತಿದ್ದಾನೆ.

ಇದೇ ರೀತಿ ಮೂರನೇ ಲೋಕವನ್ನು ಸ್ಥಾಪನೆ ಮಾಡಬೇಕಾದರೆ ಎರಡು ರೀತಿಯ ಗುಂಪುಗಳೊಡನೆ ಆಳ್ವಿಕೆ ಮಾಡುತ್ತಾರೆ.
1) ನಕ್ಷತ್ರದಂತೆ ಇರುವ ಜನ 2) ಸಮುದ್ರದ ಬಳಿ ಇರುವ ಮರಳಿನಂತೆ ಇರುವ ಜನ.
**ಎಫೇಸ 2:2** " ನೀವು ಪೂರ್ವದಲ್ಲಿ ಪಾಪಾಪರಾದಗಳನ್ನು ಮಾಡುವವರಾಗಿದ್ದು ಇಹಲೋಕಾಚಾರಕ್ಕನುಸಾರವಾಗಿ ನಡೆದುಕೊಂಡಿರಿ ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ". _ _ _ _ _ _ _ _.

ಅಂದರೆ ಅದೇ ರೀತಿ ಕ್ರಿಸ್ತನು ಮಾಯುಮಂಡಲದಲ್ಲಿದ್ದುಕೊಂಡು ಒಂದು ಪದ್ಧತಿಯನ್ನು ಜಾರಿಗೆ ತಂದು ಆಳ್ವಿಕೆ ಮಾಡುತ್ತಾರೆ. ಭೂಲೋಕದಲ್ಲಿ ಹಳೇಕಾಲದ ಅನೋಕನಿಂದ ಹಿಡಿದು ಸ್ನಾನಿಕನಾದ ಯೋಹಾನನವರೆಗೂ ಇರುವವರಿಗೆ ಏನು ಕೆಲಸ ಕೊಡುತ್ತಾರೆ.

**ಕೀರ್ತನೆ 45:16** "(ಅರಸನೇ) ವಂಶ ಪಾರಂಪರ್ಯವಾಗಿ ಬಂದ ಸ್ಥಾನದಲ್ಲಿ ಇರುವುದಕ್ಕೆ ನಿನಗೆ ಮಕ್ಕಳು ಹುಟ್ಟುವರು ಅವರನ್ನು ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸುವಿ" ಈ ವಾಕ್ಯವನ್ನು ತಮಿಳು ಪರಿಶುದ್ಧ ವೇದಾಗಗಮ್‌ನಲ್ಲಿ ಓದುವಾಗ ಅಲ್ಲಿ ಬರುವ ಅರ್ಥವೇನೆಂದರೆ "ನಿನ್ನ ತಂದೆಗಳ ಬದಲಾಗಿ ನಿಮ್ಮವರ ಕುಮಾರರುಗಳು ಇರುತ್ತಾರೆ" ಎಂದು ಬರೆಯದಿದೆ.

ಇದು ಯಾರ ಬಗ್ಗೆ ಹೇಳುತ್ತಿದ್ದಾರೆ ಎಂದು ನೋಡೋಣ **ಕೀರ್ತನೆ 45:6** ರಲ್ಲಿ "ದೇವರೇ ನಿನ್ನ ಸಿಂಹಾಸನ ಯುಗಯುಗಾಂತರಗಳಲ್ಲಿಯೂ ಇರುವುದು" ಅಂದರೆ ಈ ವಾಕ್ಯದಲ್ಲಿ ತಿಳಿಸುತ್ತಿರುವುದು ಯೇಸು ಕ್ರೀಸ್ತನ ಬಗ್ಗೆ. ಹೀಗೆ ಹೇಳಿದ ಮೇಲೆ 16ನೇ ವಚನದಲ್ಲಿ ನಿನ್ನ ತಂದೆಗಳು ಅಂದರೆ ಪಿತೃಗಳಿಗೆ ಬದಲಾಗಿ ಪಿತೃಗಳ ಮಕ್ಕಳಿರುತ್ತಾರೆ ಎಂದು ಬರೆದಿದೆ. ಇದು ಯಾವ ಅರ್ಥವನ್ನು ಕೊಡುತ್ತದೆ ಎಂದರೆ ಕ್ರೀಸ್ತನು ಭೂಲೋಕಕ್ಕೆ ಬರುವಾಗ ದಾವೀದನು, ಅಬ್ರಹಾಮನು, ಯಾಕೋಬ ಯೇಸುವಿಗೆ ತಂದೆಯಾಗಬೇಕಿತ್ತು. ಇದೇ ಯೇಸು ಕ್ರೀಸ್ತನು 2ನೇ ಬರುವಿಕೆಯಲ್ಲಿ ರಾಜಾಧಿರಾಜನಾಗಿ ಬರುವಾಗ ಹಳೇ ಕಾಲದ ಎಲ್ಲಾ ಪಿತೃಗಳು ಪ್ರವಾದಿಗಳು ಯೇಸುವಿಗೆ ಮಕ್ಕಳಾಗಿ ಬಿಡುತ್ತಾರೆ, ಇದಕ್ಕಾಗಿಯೇ ದಾವೀದನ ಬೇರು, ಚಿಗುರು ಎರಡು ಒಂದೇ ಸಮಯದಲ್ಲಿ ಹೇಗೆ ಆಗಲು ಸಾಧ್ಯ? ಹೇಗೆಂದರೆ ಮೊದಲನೇ ಬರುವಿಕೆಯಲ್ಲಿ ಯೇಸು ಕ್ರೀಸ್ತರು ದಾವೀದನ ಬುಡದಿಂದ ಬಂದ ಚಿಗುರು ಆದರು ಮತ್ತು 2ನೇ ಬರುವಿಕೆಯಲ್ಲಿ ಅದೇ ಬುಡಕ್ಕೆ ಬೇರು ಆಗುತ್ತಾರೆ. ಹೇಗೆಂದರೆ ಬೇರಿನಿಂದಲೇ ಮರಕ್ಕೆ ಜೀವ ಬರುವುದು, ಅದೇರೀತಿ ಯೇಸು ಕ್ರೀಸ್ತರು ದಾವೀದನ ವಂಶಕ್ಕೆ ಜೀವ ಕೊಡುತ್ತಾರೆ ಎಂದರ್ಥ.

ಪರಲೋಕದಲ್ಲಿ ಸಭೆ ಮಂತ್ರಿಗಳಾಗಿದ್ದರೆ ಭೂಲೋಕದಲ್ಲಿ ಪಿತೃಗಳು ಮಂತ್ರಿ(ಅಧಿಕಾರಿ)ಗಳಾಗಿ ಇರುತ್ತಾರೆ ಅಪೋಸ್ತಲನಾದ ಪೌಲನು ಇಬ್ರಿಯರಿಗೆ ಬರೆದ ಪತ್ರದಲ್ಲಿ 11ನೇ ಅಧ್ಯಾಯದಲ್ಲಿ ಬರೆದ ಎಲ್ಲಾ ವಿಶ್ವಾಸದ ವೀರರು ದೇವರ ರಾಜ್ಯದಲ್ಲಿ ಅಧಿಕಾರಿಗಳಾಗಿ ಇರುತ್ತಾರೆ. ಉದಾ :- ಮೋಶೆಯನ್ನು ಐಗುಪ್ತದ ಅಧಿಕಾರಿಯನ್ನಾಗಿ ಕೊಡಬಹುದು, ಅದೇ ರೀತಿ ಐಎಎಸ್ ಡಿಪಾರ್ಟ್‌ಮೆಂಟ್ ಎಲೀಯನಿಗೆ ಕೊಡಬಹುದು, ಆಹಾರ ಖಾತೆಯನ್ನು ಯೊಸೇಫನಿಗೆ ಕೊಡಬಹುದು, ಹಣಕಾಸಿನ ವ್ಯವಸ್ಥೆಯನ್ನು ದಾನಿಯೇಲನಿಗೆ ಕೊಡಬಹುದು ಮತ್ತು ಅರಣ್ಯ ಇಲಾಖೆಯನ್ನು ನೋಹನಿಗೆ ಕೊಡಬಹುದು ಏಕೆಂದರೆ ಪ್ರಾಣಿ, ಪಕ್ಷಿಗಳನ್ನು ಸರಿಯಾಗಿ ನಡೆಸುತ್ತಾರೆ. ನೋಹನು 40 ದಿನಗಳು ಪ್ರಾಣಿ, ಪಕ್ಷಿಗಳನ್ನು ನಾವೆಯಲ್ಲಿ ಸಾಕಿ ಸಲಹಿರುವುದರಿಂದ. ಭಾರತಕ್ಕೆ ಯಾರು ಅಧಿಕಾರ ಕೊಡುತ್ತಾರೆ ಇಲ್ಲಿ ಎಲ್ಲರು ಮೋಸಗಾರರೇ ಅದಕ್ಕಾಗಿ ಯಾಕೋಬನಿಗೆ ಕೊಡಬಹುದು. ಈ ರೀತಿ ದೇವರು ಅವರ ರಾಜ್ಯ ಪ್ರಾರಂಭಿಸುವ ಮೊದಲು 2ನೇ ಲೋಕವನ್ನು ಅಂತ್ಯ ಮಾಡುತ್ತಾರೆ. ಯಾವ ರೀತಿ ಎಂದರೆ
**2ಪೇತ್ರ 3:7** "ಆದರೆ ಈಗಿರುವ ಭೂಮ್ಯಾಕಾಶಗಳು ಬೆಂಕಿಯ ಮೂಲಕ ನಾಶ ಮಾಡುವುದಕ್ಕೆ ಇಡಲ್ಪಟ್ಟಿದೆ".

ಕೆಲವರು 2ನೇ ಲೋಕವನ್ನು ದೇವರು ಪರಲೋಕದಿಂದ ಬೆಂಕಿ ಸುರಿಸಿ ನಾಶ ಮಾಡುತ್ತಾರೆ ಅಥವಾ ಅಣುವಸ್ತ್ರಗಳ ಮೂಲಕ ನಾಶ ಮಾಡುತ್ತಾರೆ ಎಂದು ಹೇಳುತ್ತಾರೆ. ಒಂದು ಮತ್ತು 2ನೇ ಮಹಾ ಯುದ್ಧದಲ್ಲಿ ಅಣುಗಳಿಂದ ನಾಶ ಮಾಡಲು ವಿಫಲರಾದರು, ಸಮಾಧಾನ ಬಂದಿತಾ ಇಲ್ಲವಾ ಆದರೂ ಈಗ ಮೂರನೇ ಮಹಾ ಯುದ್ಧ ನಡೆಯಲು ಹೋಗುತ್ತದೆ. ಹೇಗಿದ್ದರು ಸಮಾಧಾನ ಬರುವುದಿಲ್ಲ.

ಇದು ನೇರವಾದ ಭಾಷೆಯಲ್ಲ ಹಾಗಾದರೆ ಬೆಂಕಿ ಎಂದರೇನು ?
ಸಹಜವಾದ ಬೆಂಕಿಯನ್ನು ಹಾಕಿದರೆ ಪಾಪ ಹೋಗುವುದಿಲ್ಲ ಹಾಗೆಯೇ ಇರುತ್ತದೆ, ಆದುದರಿಂದ **ಚೆಫನ್ಯ 3:8** ರಲ್ಲಿ "ಯೆಹೋವನು ಇಂತೆನ್ನುತ್ತಾನೆ ಹೀಗಿರಲು ನನ್ನನ್ನು ಕಾದು ಕೊಂಡಿರ್ರಿ, ನಾನು ಬೇಟೆ ಹಿಡಿಯುವುದಕ್ಕೆ ಏಳುವ ದಿನವನ್ನು ಕಾದು ಎದುರು ನೋಡಿರಿ. ಹೌದು ಜನಾಂಗಗಳ ಮೇಲೆ ನನ್ನ ರೌದ್ರವನ್ನು ಹೌದು, ನನ್ನ ಉಗ್ರ ಕೋಪವನ್ನು ಹೋಯ್ದು ಬಿಡುವುದಕ್ಕಾಗಿ ಆ ಜನಾಂಗಗಳನ್ನು ಸೇರಿಸಿ ಆ ರಾಜ್ಯಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿದ್ದೇನೆ. ಲೋಕವೆಲ್ಲಾ ನನ್ನ ಕೋಪಾಗ್ನಿಗೆ ತುತ್ತಾಗಿದೆಯಷ್ಟೇ".

ಆ ಬೆಂಕಿ ಅಂದರೆ ದೇವರ ಕೋಪವೇ, ಇದೇ ಅರ್ಥದಲ್ಲಿ ಹೇಳುತ್ತಾರೆ. ಇದನ್ನೇ **2ಪೇತ್ರ 3:10** ರಲ್ಲಿ "ಆದರೂ ಆದಿನ ಕಳ್ಳನು ಬರುವಂತೆ ಬರುತ್ತದೆ, ಆದಿನದಲ್ಲಿ ಆಕಾಶ ಮಂಡಲವು ಮಹಾ ಗೋಷದಿಂದ ಇಲ್ಲದೆ ಹೋಗುವುದು. ಸೂರ್ಯ, ಚಂದ್ರ, ನಕ್ಷತ್ರಗಳು ಉರಿದು ಲಯವಾಗುವವು. ಭೂಮಿಯು ಅದರಲ್ಲಿರುವ ಕೆಲಸಗಳು ಸುಟ್ಟು ಹೋಗುವುವು". ಆಕಾಶವೆಂದರೆ ವಾಯು ಮಂಡಲ ಇದನ್ನೇ ಯೇಸು ಕ್ರೀಸ್ತನು 'ಭೂಮ್ಯಾಕಾಶ ಅಳಿದು ಹೋದರು ನನ್ನ ಮಾತು ಎಂದಿಗೂ ಅಳಿದು ಹೋಗುವುದಿಲ್ಲ' ಎಂದರು. ಸೈತಾನನು ಅವನ ಆಳ್ವಿಕೆ ನಾಶವಾಗಿ ಭೂಮಿಯಲ್ಲಿರುವ ಯೋಜನೆ, ಕ್ರಿಯೆಗಳು ಮತ್ತು ಸೈತಾನನಿಂದ ಬಂದ ಕಾರ್ಯಗಳು = ಚಲನ

ಚಿತ್ರ, ಬಾರ್‌ಗಳು, ಕಂಪ್ಯೂಟರ್, ಮೊಬೈಲ್, ಪಾಪ, ದ್ವೇಶ, ಅಸೂಯೆ, ಹೊಟ್ಟೇಕಿಚ್ಚು, ಒಟ್ಟಾರೆ ಎಲ್ಲವೂ ನಾಶವಾಗುತ್ತದೆ, ಆದರೂ ಭೂಮಿ ನಾಶವಾಗುವುದಿಲ್ಲ.

**<u>ಪ್ರಸಂಗಿ</u>** <u>1:4</u> ''ಒಂದು ತಲಾಂತರ ಗತಿಸುವುದು, ಮತ್ತೊಂದು ತಲಾಂತರ ಬರುವುದು ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು"

**<u>ಯೆಶಾಯ</u>** <u>45:18</u> ''ಆಕಾಶ ಮಂಡಲವನ್ನು ಸೃಷ್ಠಿಸಿದ ಯೆಹೋವನ ಮಾತನ್ನು ಕೇಳಿರಿ ಆತನೇ ದೇವರು ಭೂಲೋಕವನ್ನು ನಿರ್ಮಿಸಿ ರೂಪಿಸಿ ಸ್ಥಾಪಿಸಿದನು, ಅದನ್ನು ಶೂನ್ಯಸ್ಥಾನವಾಗಿರಲೆಂದು ಸ್ಥಾಪಿಸದೆ ಜನ ನಿವಾಸಕ್ಕಾಗಿ ಸ್ಥಾಪಿಸಿದನು" ಆದುದರಿಂದ ಭೂಮಿ ನಾಶವಾಗುವುದಿಲ್ಲ.

**<u>ಕೀರ್ತನೆಗಳು</u>** <u>115:16</u> ''ಪರಲೋಕವು ಯೆಹೋವನದು ಭೂಮಂಡಲವನ್ನು ನರಸಂತಾನಕ್ಕೆ ಕೊಟ್ಟಿದ್ದಾರೆ. ಆದ್ದರಿಂದ 2ನೇ ಲೋಕ ನಾಶವಾದರೂ ಭೂಮಿ ಹಾಗೆ ಇರುತ್ತದೆ ಮತ್ತು ಕೆಲವು ಜನ ಹೇಗೆ ಮೊದಲನೇ ಲೋಕದಿಂದ 2ನೇ ಲೋಕಕ್ಕೆ ಹೋದರು, ಅದೇ ರೀತಿ 2ನೇ ಲೋಕದಿಂದ ಕೆಲವರು ಮರಣ ಹೊಂದದೆ ಮೂರನೇ ಲೋಕಕ್ಕೆ ಹೋಗುತ್ತಾರೆ.
**<u>ಯೆಶಾಯ</u>** <u>24:6</u> ಮತ್ತು <u>24, 22</u>ನೇ ವಾಕ್ಯದಲ್ಲಿದೆ. ಹೀಗೆ ಮೂರನೇ ಲೋಕ ಸ್ಥಾಪಿಸಿದ ಮೇಲೆ ಆ ಲೋಕ ಹೇಗಿರುತ್ತದೆ ಎಂದರೆ **2ಪೇತ್ರ** 3:13 '' ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನ ಆಕಾಶ ಮಂಡಲವನ್ನು, ನೂತನ ಭೂ ಮಂಡಲವನ್ನು ಎದುರು ನೋಡುತ್ತಾ ಇದ್ದೇವೆ ಅವುಗಳಲ್ಲಿ ನೀತಿಯು ವಾಸವಾಗಿರುತ್ತದೆ".

ಮೂರನೇ ಲೋಕದಲ್ಲಿ ನೂತನ ಭೂಮಂಡಲ ಅಂದರೆ ಹಳೇ ಕಾಲದ ಪಿತೃಗಳು ಆಳ್ವಿಕೆ ಮಾಡುತ್ತಾ ಇರುತ್ತಾರೆ.
ನೂತನ ಆಕಾಶವೆಂದರೆ ಸೈತಾನ ಅವನ ದೂತರು ಅಲ್ಲಿರುವುದಿಲ್ಲ, ಕ್ರೀಸ್ತನು ಮತ್ತು ಸಭೆ ಆಳ್ವಿಕೆ ಮಾಡುತ್ತಾರೆ. ಹಾಗಾದರೆ 3ನೇ ಲೋಕ ಹೇಗಿರುತ್ತದೆ ನೀವೇ ಯೋಚಿಸಿ. ಆಗಲೇ ಯೇಸು ಕ್ರೀಸ್ತರು ಸಮಾಧಾನ ಪ್ರಭುವಾಗಿ ಇರುತ್ತಾರೆ. ಅದಕ್ಕೆ ''ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನು ಪರಿಶುದ್ಧನು ಆಗಿದ್ದಾನೆ ಅವನ ಮೇಲೆ ಎರಡನೇ ಮರಣಕ್ಕೆ ಅಧಿಕಾರವಿಲ್ಲ" ಇವರೇ ಸಭೆ.

**<u>ಪ್ರಕಟಣೆ</u>** <u>3:21</u> ರಲ್ಲಿ''ನಾನು ಜಯ ಹೊಂದಿ ನನ್ನ ತಂದೆಯ ಸಿಂಹಾಸನದಲ್ಲಿ ಕುಳಿತುಕೊಂಡೆನು, ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು". ಯಾರು ಜಯಹೊಂದುತ್ತಾರೋ ಅವರು ಅಂದರೆ ಸಭೆ ಇವರು ಕ್ರೀಸ್ತನ ಜೊತೆ ಸೇರಿ ಆಳುತ್ತಾರೆ. ಮತ್ತು 2ನೇ ಬರುವಿಕೆಯಲ್ಲಿ ಯೇಸು ಕ್ರೀಸ್ತನು ಬಂದು ಸೈತಾನನನ್ನು ಕಟ್ಟಿ ಹಾಕುತ್ತಾರೆ. ಯಾಕೆಂದರೆ ಸೈತಾನನು ಇನ್ನೂ ಜನರನ್ನು ಮರುಳು ಗೊಳಿಸಬಾರದೆಂದು ಕಟ್ಟಿಹಾಕುತ್ತಾರೆ. ಇಂತಹ ಸಮಯದಲ್ಲಿ ಸತ್ಯವನ್ನು ಜನರಿಗೆ ಕೊಟ್ಟರೆ ಎಲ್ಲರೂ ಸ್ವೀಕರಿಸುತ್ತಾರೆ, ಆಮೇಲೆ ಯೇಸು ಕ್ರೀಸ್ತನು ಸತ್ತ ಮನುಷ್ಯರನ್ನೆಲ್ಲಾ ಇದೇ ಭೂಮಿಗೆ ಕರೆದುಕೊಂಡು ಬಂದು ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುತ್ತಾರೆ.

**<u>ಪ್ರಕಟಣೆ</u>** <u>21:4</u> ''ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು". ಎಲ್ಲರ ಕಣ್ಣೀರನ್ನೆಲ್ಲಾ ಒರೆಸಿ ಬಿಡುವುದಕ್ಕೆ ಹೇಗೆ ಸಾಧ್ಯ ? ಅಂದರೆ ಅಲ್ಲಿ ಇನ್ನು ಮುಂದೆ ಮರಣ, ಗೋಳಾಟವಿರುವುದಿಲ್ಲ, ರೋಗಕ್ಕೆ ತುತ್ತಾಗುವುದಿಲ್ಲ ಹೀಗಿರುವಾಗ ಕಣ್ಣೀರು ಎಲ್ಲಿಂದ ಬರುತ್ತದೆ. ಈ ರೀತಿಯಾಗಿ ಕ್ರೀಸ್ತನು ಮತ್ತು ಸಭೆ ಜನರನ್ನು ನಿತ್ಯ ಜೀವದ ಕಡೆ ನಡೆಸುತ್ತಾರೆ. **<u>ಉದಾ:–</u>** ರಾಜ್‌ಕುಮಾರ್ ಸತ್ತಾಗ ಎಷ್ಟೊಂದು ಜನ ಕಣ್ಣೀರು ಬಿಟ್ಟರು, ಎಮ್.ಜಿ.ಆರ್. ಸತ್ತಾಗ ತಮಿಳು ನಾಡು ದುಃಖದಲ್ಲಿ ಮುಳುಗಿತ್ತು. ಅದೇ ರೀತಿ ಪ್ರತಿಯೊಬ್ಬನು ತನ್ನ ತಂದೆ, ತಾಯಿ, ಗಂಡ, ಹಂಡತಿ ಎಲ್ಲರನ್ನು ಕಳೆದುಕೊಂಡ ಮಕ್ಕಳು ಎಷ್ಟು ದುಃಖ ಪಟ್ಟಿರುತ್ತಾರೆ, ಆದರೆ ಆ ದಿನದಲ್ಲಿ ಎಲ್ಲರೂ ಎದ್ದು ಬರುವಾಗ ಎಲ್ಲರೂ ಎಷ್ಟು ಸಂತೋಷ ಪಡುವರು ಹೇಳಲು ಅಸಾಧ್ಯ..

ದೇವರು ಸಮಸ್ತವನ್ನು ಸರಿ ಮಾಡುತ್ತಾರೆ, ಯಾವ ರೀತಿ ಅಂದರೆ ಮೊದಲನೇ ಲೋಕದಲ್ಲಿ ಏನೇನೆಲ್ಲಾ ಕೆಟ್ಟುಹೋಗಿತ್ತೋ ಅದನ್ನೆಲ್ಲಾ ಸರಿಮಾಡಿ ಮನುಷ್ಯರಿಗೆ ಒದಗಿಸೋದೇ ಸಮಸ್ತವನ್ನು ಸರಿಮಾಡುವುದು.
**<u>ಅಪೋಸ್ತಲರ ಕೃತ್ಯಗಳು</u>** <u>3:21</u> ''ಆದರೆ ಸಮಸ್ತವನ್ನು ಸರಿಮಾಡುವ ಕಾಲ ಬರುವ ತನಕ ಪರಲೋಕವೇ ಆತನ ವಾಸಸ್ಥಾನವಾಗಿರಬೇಕು". ಮೊದಲನೇ ಲೋಕದಲ್ಲಿ ಯಾವತರಹ ಇದ್ದರು ಮನುಷ್ಯರು ಹೇಗೆ ಸುಂದರವಾಗಿ ಇದ್ದರು ಈಗ ಹೇಗಿದ್ದಾರೆ ಕಪ್ಪಗೆ, ಒರಟಾಗಿ ಒಬ್ಬೊಬ್ಬರು ಒಂದೊಂದು ತರಹ ಇದ್ದಾರೆ. ಆದರೆ ಮುಂದೆ ಹೇಗಿರುತ್ತಾರೆ ಒಂದು ವಾಕ್ಯ ಓದೋಣ !

**ಯೋಬು 33:25** " ಅವನ ದೇಹವು ಬಾಲ್ಯಕ್ಕಿಂತಲೂ ಕೋಮಲವಾಗಿರುವುದು ಅವನು ಪುನಃ ಎಳೆತನದ ದಿನಗಳನ್ನು ಅನುಭವಿಸುವನು" ಅಂದರೆ ಅವನ ವಯಸ್ಸು ಬರುತ್ತಾ ಬರುತ್ತಾ ಕಡಿಮೆಯಾಗುತ್ತದೆ. ಒಬ್ಬನು 80 ವಯಸ್ಸಿನಲ್ಲಿ ಎದ್ದು ಬಂದರೆ 70,60,50 ಕೊನೆಗೆ 30ಕ್ಕೆ ಬಂದು ನಿಲ್ಲುತ್ತದೆ ಕಾರಣ ಆದಾಮನು 30ನೇ ವಯಸ್ಸಿನಲ್ಲಿ ಪಾಪ ಮಾಡಿರಬಹುದು. ಅವರ ದೇಹ ಬಹಳ ಮೃದುವಾಗಿ ಮಗುವಿನ ದೇಹದಂತೆ ಇರುತ್ತದೆ. ಮೊದಲನೇ ಲೋಕದಲ್ಲಿ ಅಷ್ಟು ಸುಂದರವಾಗಿದ್ದರು ಆದಕಾರಣ ದೇವದೂತರು ಇಷ್ಟಪಟ್ಟು ಮದುವೆ ಆದರು, ಅಂತಹ ಸ್ಥಿತಿಯಲ್ಲಿದ್ದುದರಿಂದ 1000 ವರ್ಷದಲ್ಲಿ ಜನರೆಲ್ಲಾ ಆಸ್ಥಿತಿಗೆ ಮತ್ತೆ ಮರಳುತ್ತಾರೆ.

**ಯೆಶಾಯ 11:6–11** "ತೋಳ ಕುರಿಯ ಸಂಗಡ ವಾಸಿಸುವುದು, ಚಿರತೆ ಮೇಕೆಯೊಂದಿಗೆ ಮಲಗುತ್ತದೆ, ಪ್ರಾಯದ ಸಿಂಹ ಹಸುವಿನ ಜೊತೆ ಹುಲ್ಲು ಮೇಯುತ್ತದೆ ಇವುಗಳನ್ನು ಚಿಕ್ಕ ಮಗು ನಡೆಸುತ್ತದೆ". ಅಂದರೆ ದೇವರ ರಾಜ್ಯದಲ್ಲಿ ಜನರು ನೋಡಲು 'ಮೃಗಾಲಯ' ಬೇಕಾಗಿಲ್ಲ. ಹಸು ಕರಡಿ ಸಂಗಡ ಮೇಯುವುದು, ಸಿಂಹವು ಎತ್ತಿನಂತೆ ಹುಲ್ಲು ಮೇಯುವುದು ಆದರೆ ಈಗ ಸಿಂಹ ಹುಲ್ಲು ಮೇಯುವುದನ್ನು ಸಾಧ್ಯನಾ ? ಹೀಗೆ ನಾವು ನೋಡುವಾಗ ಮೊದಲನೇ ಲೋಕದಲ್ಲಿ ಸಿಂಹವು ಹುಲ್ಲು ಮೇಯುತ್ತಿತ್ತು, 1000 ವರ್ಷದಲ್ಲಿ ಮತ್ತೇ ಅದೇ ಹುಲ್ಲನ್ನು ಮೇಯಲು ಹೋಗುತ್ತದೆ, ಆಗ ಎಲ್ಲಾ ಪ್ರಾಣಿಗಳೆಲ್ಲಾ ಒಂದೇ ಸಂತಾನದವುಗಳಂತೆ ಇರುತ್ತವೆ. ಈ ಕಾಲವನ್ನೇ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವುದು, ಸಮಸ್ತವನ್ನು ಸರಿಮಾಡುವ ಕಾಲವೆಂದು. "ಮೊಲೆ ಬಿಟ್ಟ ಮಗು ಹಾವಿನ ಬಿಲದಲ್ಲಿ ಕೈ ಹಾಕುವುದು, ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರು ಕೇಡು ಮಾಡುವುದಿಲ್ಲ".

**ಕೀರ್ತನೆಗಳು 22:27** "ಭೂಮಂಡಲದವರೆಲ್ಲರೂ ಎಚ್ಚರಗೊಂಡು ಯೆಹೋವನ ಕಡೆಗೆ ತಿರಿಗಿಕೊಳ್ಳುವರು".
ಅಂದರೆ ಈಗ ನಾವು ಎಷ್ಟು ಸುವಾರ್ತೆ ಸಾರಿದರೂ ಎಚ್ಚರಿಸಿದರು ಯಾರೂ ಕೇಳುವುದಿಲ್ಲ, ಆದರೆ ಕ್ರೇಸ್ತನ ಸಾವಿರ ವರ್ಷದಲ್ಲಿ ಜನರು ಎಚ್ಚೆತ್ತುಕೊಂಡು ದೇವರ ಕಡೆಗೆ ತಿರಿಗಿಕೊಳ್ಳುತ್ತಾರೆ. ಈಗ ಸೈತಾನನು ಇದ್ದಾನೆ, ಆದರೆ ದೇವರ ರಾಜ್ಯದಲ್ಲಿ ಇರುವುದಿಲ್ಲ. ಹೀಗಿರುವುದರಿಂದ ಜನರೆಲ್ಲರೂ ದೇವರ(ಸತ್ಯದ)ಕಡೆಗೆ ತಿರಿಗಿಕೊಳ್ಳುತ್ತಾರೆ. **ಕೀರ್ತನೆಗಳು 22:28** "ರಾಜ್ಯ ಯೆಹೋವನದು" ಆಗ ರಾಜ್ಯ ಪ್ರಾರಂಭಿಸಿದ ನಂತರ ಮತ್ತೆ ಸೈತಾನನಿಗೆ ಬಿಡುಗಡೆಯಾಗುತ್ತದೆ. **ಪ್ರಕಟಣೆ 20:7** ಅವರು ದೇಶದಲ್ಲೆಲ್ಲಾ ತುಂಬಿಕೊಂಡು ನಮ್ಮ ದೇವರ ದಂಡಿಗೂ, ನಮ್ಮ ಪ್ರಿಯ ಪಟ್ಟಣಕ್ಕೂ ಮುತ್ತಿಗೆ ಹಾಕಿದರು, ಆಗ ಪರಲೋಕದಿಂದ ಬೆಂಕಿ ಬಂದು ಅವರನ್ನು ಧಹಿಸಿಬಿಟ್ಟಿತು.

ಹೀಗೆ ಸೈತಾನನು ಅವರ ದೂತರು ಮತ್ತು ಅವನ ಕಡೆಗೆ ಹೋದ ಮನುಷ್ಯರು ನಾಶವಾಗುತ್ತಾರೆ. ದೇವರು ಈ ರೀತಿಯಾದ ಒಂದು ಯೋಜನೆಯನ್ನು ಮಾಡಿದ್ದಾರೆ. ಈ ಕಾರಣದಿಂದ ನಮ್ಮ ಯೇಸು ಕ್ರಿಸ್ತನು ನಮಗೆ ಒಂದು ಪ್ರಾರ್ಥನೆಯನ್ನು ಹೇಳಿ ಕೊಟ್ಟಿದ್ದಾರೆ. ಅದೇನೆಂದರೆ "ಪರಲೋಕದಲ್ಲಿರುವ ನಮ್ಮ ತಂದೆಯೇ ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ, ನಿನ್ನ ರಾಜ್ಯ ಬರಲಿ ನಿನ್ನ ಚಿತ್ತ ಪರಲೋಕದಲ್ಲಿಯೂ ನೆರವೇರುವ ಪ್ರಕಾರ ಭೂಲೋಕದಲ್ಲಿ ನೆರವೇರಲಿ. ಅಂದರೆ ದೇವರ ರಾಜ್ಯ ಭೂಮಿಯ ಮೇಲೆ ಬರುತ್ತದೆ. ಪರಲೋಕದಲ್ಲಿ ಅಲ್ಲ. ಅಲ್ಲಿ ಹೇಗೆ ದೇವರ ಚಿತ್ತ ನೆರವೇರುತ್ತದೆಯೋ , ಅದೇರೀತಿ ಭೂಮಿಯಲ್ಲಿಯೂ ನೆರವೇರುತ್ತದೆ. ಇದೇ ಮೂರನೇ ಲೋಕ.. 3ನೇ ಆಕಾಶಮಂಡಲವನ್ನು ಅಪೋಸ್ತಲನಾದ ಪೌಲನಿಗೆ ದೇವರು ಒಂದು ದರ್ಶನದಲ್ಲಿ ತೋರಿಸುತ್ತಾರೆ.

**2 ಕೊರಿಂಥ 12:2, 4** " ಕ್ರಿಸ್ತನಲ್ಲಿದ್ದಂತ ಒಬ್ಬ ಮನುಷ್ಯನನ್ನು ಬಲ್ಲೆಯ ಅವನು 14 ವರ್ಷಗಳ ಹಿಂದೆ ಮೂರನೇ ಆಕಾಶದ ಪರಿಯಂತರಕ್ಕೂ ಒಯ್ಯಲ್ಪಟ್ಟನು. ಅವನು ದೇಹ ಸಹಿತವಾಗಿ ಹೋದನೋ ದೇಹ ರಹಿತವಾಗಿ ಒಯ್ಯಲ್ಪಟ್ಟನೋ ನಾನರಿಯೇ ಅಂದರೆ 3ನೇ ಆಕಾಶಕ್ಕೆ ದೇಹದಲ್ಲಿ ಓದರೋ ಅಥವಾ ಆತ್ಮದಲ್ಲಿ ಓದರೋ ಕಂಡು ಹಿಡಿಯಲು ಆಗಲಿಲ್ಲ. ಅಂತಹ ಮನುಷ್ಯನನ್ನು ಕಂಡು ಹಿಡಿಯಲು ಆಗಲಿಲ್ಲಾ, ಅಂತಹ ಮನುಷ್ಯನನ್ನು ಪರದೇಸಿಗೆ ಹೊಯ್ಯಲ್ಪಟ್ಟರು ಅಂದರೆ ಯಾವುದು ಕೆಲವರು ಹೇಳುವುದೇನೆಂದರೆ. ಹಾಗೆಯೇ ಮೇಲಕ್ಕೆ ಹೋದರೆ ಮೊದಲನೆಯ ಆಕಾಶದಲ್ಲಿ ಪಿತೃಗಳಿರುತ್ತಾರೆ ಹಾಗೆಯೇ ಮೇಲಕ್ಕೆ 2ನೇ ಆಕಾಶದಲ್ಲಿ ಉತ್ತರಿಕೆಯ ಸ್ಥಳ ಎಂದು ಇರುತ್ತದೆ. ಅಲ್ಲಿ ಪಾಪವನ್ನು ಮಾಡದೇ ಪುಣ್ಯನೂ ಮಾತದೆ ಅತಂತ್ರ್ಯ ಸ್ಥಿತಿಯಲ್ಲಿರುವ ಜನರು ಅಲ್ಲಿರುತ್ತಾರೆ. ಆ ಮೇಲೆ ಇನ್ನ ಮೇಲಕ್ಕೆ ಹೋದರೆ ಅದೇ ಮೂರನೆಯ ಆಕಾಶ ಪರಲೋಕ ಅದೇ ಇದಕ್ಕೆ ಇಂಗ್ಲೀಷಿನಲ್ಲಿ "ಪ್ಯಾರಡೇಸ್" ಎಂದು ಕರೆಯುವುದುಂಟು. ಇದನ್ನು ನಾವು ಸತ್ಯವೇದದಲ್ಲಿ ಪ್ಯಾರಡೇಸ್ ಎಚಿರೇನು ಎಂದು ಹುಡುಕಬೇಕು.
**ಪ್ರಕಟಣೆ 2:7** "_ದೇವರಾತ್ಮನು ಸಭೆಗೆ ಹೇಳುವುದನ್ನು ಕಿವಿಯುಳ್ಳವನು ಕೇಳಲಿ. "ಯಾವುನು ಜಯ ಹೊಂದುತ್ತಾನೋ ಅಂತವನಿಗೆ ದೇವರ ಪರದೇಸಿನಲ್ಲಿ ಇರುವ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವುದಕ್ಕೆ ಕೊಡುವನು" ಇಲ್ಲಿ ಜೀವದಾಯಕ ವೃಕ್ಷ ದೇವರ ಪರದೇಶಿನಲ್ಲಿದೆ ಎಂದು ಹೇಳುತ್ತಾರೆ. ಇದೇ ತರಹ ನಾವು ಎಲ್ಲಿ ನೋಡುತ್ತೇವೆ ಎಂದರೆ **ಆದಿಕಾಂಡ 2:9 ರಲ್ಲಿ**

ಮತ್ತೇ ಯೆಹೋವ ದೇವರು ನೋಡುವುದಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರಹದ ಮರಗಳನ್ನು ಬೆಳೆಯ ಮಾಡಿ ಆವನದ ಮಧ್ಯದಲ್ಲಿ ಜೀವದಾಯಕ ವೃಕ್ಷವನ್ನು ಒಳ್ಳೇದರ ಕಟ್ಟದರ ಅರುಹನ್ನು ಹುಟ್ಟಿಸುವ ವೃಕ್ಷವನ್ನು ಬೆಳೆಸಿದನು. ಹಾಗದರೆ ಈ ವೃಕ್ಷ ಏದೇನ್ ತೋಟದಲ್ಲಿತ್ತು.. ಹೀಗಿರುವುದರಿಂದ ಪ್ಯಾರಡೇಸ್ ಎಂದರೆ ಇಂಗ್ಲೀಷಿನಲ್ಲಿ ಏದೇನ್ ತೋಟಕ್ಕೆ ಹೇಳುವುದು. ಇದು ಪರಲೋಕದಲ್ಲಿಲ್ಲ ಭೂಲೋಕದಲ್ಲಿದೆ. ಇದನ್ನೇ ಮೂರನೇ ಆಕಾಶವೆಂದು ಹೇಳುವುದು. ಮತ್ತು ಇದನ್ನು ಭೂಮಿಯನ್ನು ಏದೇನಿನಂತೆ ಮಾಡುತ್ತಾರೆ. ಪ್ಯಾರಡೇಸ್ ಎಂದು ಹೇಳುವ ಗ್ರೀಕ್ ವಾರ್ತೆ ಏನೆಂದರೆ ಉದ್ಯಾನವನ ಎಂದರ್ಥ. ಉದಾ:**–** ಪರಲೋಕವಲ್ಲ**,** ನಾನು ಪರದೇಶಕ್ಕೆ ಹೋಗಿ ಎಂದು ಹೇಳಿಕೊಳ್ಳುತ್ತಾರೆ. ನಮ್ಮ ದೇಶವನ್ನು ಬಿಟ್ಟು ಬೇರೆ ದೇಶ ಸುಂದರವಾದ ದೇಶವೆಂದು ಹೇಳುತ್ತಾರೆ ಅಷ್ಟೇ ಆದುದರಿಂದ ಈ ಪಾಲನೆಯನ್ನು ಮೂರನೇ ಲೋಕಕ್ಕೆ ದ್ದರ್ಶನಕ್ಕೆ ಹೊಯ್ಯಲ್ಪಟ್ಟರು ಅಷ್ಟೆ ಇದು ಮೂರು ಲೋಕಗಳ ಪಾಠು ಇಲ್ಲಿಗೆ ಮುಗಿಯಿತು.